
ಅಪರಂಜಿ
ತಿಳಿನಗೆಯ ಕಾರಂಜಿ
ಜುಲೈ - 2012




ಮಳೆ ಬಂದರೆ ನಿಮಗೇ ಅಲ್ವಾ ಅಂಕಲ್ ಮೊದಲು ಗೊತ್ತಾಗೋದು?

# ಅಪರಂಜಿ



ತಿಳಿನಗೆಯ ಕಾರಂಜಿ



ಸಂಪಾದಕ ಮಂಡಳಿ

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಟ್ರಸ್ಟಿಗಳು**
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

**ವಿಶೇಷ ಆಹ್ವಾನಿತರು**
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

**ಗೌರವ ಸಲಹೆಗಾರರು**
ಶ್ರೀ ಅ.ರಾ.ಸೇ.



**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ





**ಸಂಪುಟ 29**
**ಸಂಚಿಕೆ - 10**
**ಜುಲೈ - 2012**


## *ಈ ಸಂಚಿಕೆಯಲ್ಲಿ.....*


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ಸ್ಪಡಿ ಟೂರ್ ಪ್ರಕರಣ | **ವತ್ಸನ** | 3 |
| ಮಳೆಗಾಲ ಎಂದರೆ...! | **ಬೇಲೂರು ರಾಮಮೂರ್ತಿ** | 8 |
| ಪ್ರತಿಕ್ರಿಯೆ | **ವರುಣಾನಂದ** | 13 |
| ಬೆಂಗಳೂರಿನ..... | **ಎಚ್. ಗೋಪಾಲಕೃಷ್ಣ** | 15 |
| ತುಂತುರು | **ದಂನಾಳ** | 18 |
| ನೆನೆಯುತ್ತ.... | **ಭೂಮಿತಾಯಿ** | 22 |
| ಮಳೆಗಾಲ ಬಂದಾಗ..... | **ಭುವನೇಶ್ವರಿ ಹೆಗಡೆ** | 25 |
| ಘಂಟಾಯಣ | **ಸುಧಾ ಸರನೋಬತ್** | 31 |
| ಹುರುಳಿಕಟ್ಟು | **ಎಚ್. ಗೋಪಾಲಕೃಷ್ಣ** | 34 |
| ನಾನು ಹಾಸಿಗೆ..... | **ಡಿ.ವಿ. ಗುರುಪ್ರಸಾದ್** | 37 |



*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*
*ಪ್ರಕಾಶಕರು :* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: aparanji@hotmail.com



*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

# ಅಪರಂಜಿ ಕಿಡಿ

● ಪ್ರಕಾಶ್



ಪ್ರಧಾನಿಯವರ ಮೇಲಿನ ಆರೋಪಕ್ಕೆ ತೀವ್ರ ಪ್ರತಿಕ್ರಿಯೆ

– ದೆಹಲಿ ಸುದ್ದಿ

**● ಅಣ್ಣನ ಮುಂದೆ ಸಿಂಗನೆ? ಅನ್ನಬಹುದು ಈಗ !!**

★★★

ಮಠಾಧಿಪತಿಗಳ ವಿರುದ್ಧ ನಕಲಿ ದಾಖಲೆ ಆರೋಪ – ಪತ್ರಿಕೆ

**● 'ಕ್ಷೇತ್ರಜ್ಞ' ಅಂದರೆ ಏನು ಅಂತ ಅರ್ಥವಾಯಿತು !!**

★★★

ಹಾಲು ಉತ್ಪಾದಕರ ಹಿತ ಕಾಯಲು ಬದ್ಧ – ಹೇಳಿಕೆ

**● Milk of human kindness! ಅಂತ ಅಪರಂಜಿ ನಕ್ಕಳಂತೆ !!**

★★★

ಕಟ್ಟಡಗಳನ್ನು ಅಡವಿಟ್ಟು ಸಾಲ ಪಡೆಯಲು ಬಿ.ಬಿ.ಎಂ.ಪಿ. ಸಭೆ ನಿರ್ಣಯ – ಸುದ್ದಿ

**● ಆಧುನಿಕ ಧರ್ಮರಾಯರು ?!**

★★★

ಲಂಚ : ಬಿ.ಬಿ.ಎಂ.ಪಿ. ಅಧಿಕಾರಿಗಳ ಬಂಧನ – ಪತ್ರಿಕೆ

**● ಈ ಸುದ್ದಿಗಳನ್ನು ಒಂದೇ ದಿನ ಹಾಕಬಾರದು !!**

★★★

ಬಿಟ್ಟರೂ ಹೆಚ್ಚು ನೀರು,
ಜಯಲಲಿತಾ ತಕರಾರು !!!
ಶೀರ್ಷಿಕೆ ಅಂದರೆ ಹೀಗಿರಬೇಕು !!

★★★

ವ್ಯಂಗ ಚಿತ್ರಗಳ ಬಗ್ಗೆ ವಿವಾದ ಸುದ್ದಿ
ಕೇಳಿ ಅಪರಂಜಿ ನಡುಗಿದಳಂತೆ !!

★★★








# ಸ್ಟಡಿ ಟೂರ್ ಪ್ರಕರಣ

**- ವತ್ಸನ**

**ಅಂ**ದು ಬೆಳಗ್ಗೆ ಸರೋಜಮ್ಮ ಅಕ್ಕಿ ರೊಟ್ಟಿ ಮಾಡಿದ್ದರು. ಬಾಂಡ್ಲೆಯಲ್ಲಿ ತಟ್ಟಿದ್ದ ರೊಟ್ಟಿಗಳು ಒಂದರ ಮೇಲೊಂದು ಪೇರಿಸಿದಂತೆ ಕಾಸರೋಲಿನಲ್ಲಿ ಕುಳಿತಿದ್ದವು. ನೀವು ಏನೇ ಹೇಳಿ ಚಪ್ಪಟೆ ಕಾವಲಿಯಲ್ಲಿ ಸುಟ್ಟ ರೊಟ್ಟಿಗಿಂತ ಬಾಂಡ್ಲೆ ರೊಟ್ಟೀನೇ ಹೆಚ್ಚು ರುಚಿ ಅಂತ ನನ್ನ ಅಭಿಮತ. ರೊಟ್ಟಿ ಜೊತೆಗೆ ತೊಗರಿಬೇಳೆ ಚಟ್ನಿ ಡಬರಿಯಲ್ಲಿ ದಿವಿನಾಗಿ ಕೂತಿತ್ತು. ಪೇಪರ್ ಓದುತ್ತಾ ಕುಳಿತಿದ್ದ ಶರಲೇಖ ನಾನು ಬಂದದ್ದು ನೋಡಿ, ಪೇಪರನ್ನು ಬದಿಗಿಟ್ಟು ತಿಂಡಿಗೆ ಬಂದು ಕೂತ. ''ಏನು ವಿಶೇಷ ಪೇಪರಿನಲ್ಲಿ?'' ಅಂತ ಅವನನ್ನ ಕೇಳಿದೆ. ''ಇನ್ನೇನಿರುತ್ತೆ, ಯಥಾ ಪ್ರಕಾರ ನಮ್ಮ ರಾಜಕಾರಣಿಗಳ ಆಟಾಟೋಪ. ಇವರೆಲ್ಲಾ ಬಹಿರಂಗವಾಗಿಯೇ ತಮ್ಮ ಕಳ್ಳ ಕೆಲಸಗಳನ್ನ ಮಾಡ್ತಾರೆ. ಕತ್ತಲಲ್ಲಿ ಗುಟ್ಟಾಗಿ ಚೋರತನ ಮಾಡಿದ್ರೆ ನಮ್ಮಂತಹ ಪತ್ತೇದಾರರಿಗೆ ಕೆಲಸವಾದ್ರೂ ಸಿಗುತ್ತೆ. ಇವರಿಂದ ನಮ್ಮಗಳಿಗೂ ಕೆಲಸವಿಲ್ಲದ ಹಾಗೆ ಆಗಿದೆ. ಈಗ ನೋಡು, ನಮ್ಮ ಮಹಾನಗರ ಪಾಲಿಕೆಯ ಚುನಾಯಿತ ಪ್ರತಿನಿಧಿಗಳು ಯುರೋಪಿಯನ್ ದೇಶಗಳಿಗೆ ವ್ಯಾಸಂಗ ಪ್ರವಾಸ ಹೊರಟಿದ್ದಾರಂತೆ. ಕೈಮೇಲಿರೋ ಪ್ರಾಜೆಕ್ಟುಗಳಿಗೇ ಹಣದ ಅಭಾವ ಇರೋವಾಗ ಈ ಪ್ರಭೃತಿಗಳಿಗೆ ಪ್ರವಾಸದ ಲಕ್ಷುರಿ ಬೇರೇ. ತೀರ ಅನ್ಯಾಯ. ಅದ್ಸರಿ ನಿನ್ನೆ ನೀನು ಯಾವುದೋ ಒಳ್ಳೇ ನಾಟಕ ಅಂತ ರಂಗಶಂಕರಕ್ಕೆ ಹೋಗಿದ್ದೆಯಲ್ಲಾ, ಹೇಗಿತ್ತು ಆ ನಾಟಕ?'' ಅಂತ ಕೇಳಿದ ಶರಲೇಖ. ನಾನು ಉತ್ತರಿಸೋ ಅಷ್ಟರಲ್ಲೇ ಹೊರಬಾಗಿಲಿನ ಬೆಲ್ ಕಿಚಗುಟ್ಟಿತು. ಬಾಗಿಲು ತೆರೆದರೆ ಇನ್ಸ್ಪೆಕ್ಟರ್ ಉಳ್ಳಾಗಡ್ಡಿ ನಿಂತಿದ್ದರು. ಅವರೊಂದಿಗೆ ಇನ್ನೊಬ್ಬ ಪೋಲೀಸ್ ಅಧಿಕಾರಿ. ಉಳ್ಳಾಗಡ್ಡಿ ಒಳಗೆ ಬಂದು, ''ಶರಲೇಖ ಸಾಹೇಬ್ರು ಇವರೇ ಕಣ್ರೀ, ಇವರು ನನ್ನ ಸಹೋದ್ಯೋಗಿ, ಭೈರಪ್ಪ ಅಂತ. ಇವರು ವತ್ಸನ ಸಾಹೇಬ್ರು'' ಅಂತ ಪರಸ್ಪರ ಪರಿಚಯಿಸಿದರು.

ಶರಲೇಖ, ''ನಿಮ್ಮ ಗೆಳೆಯ ಭೈರಪ್ಪ ಒಂದು ಮಹತ್ತರವಾದ ಯೋಜನೆಯನ್ನೇ ಹೊತ್ತು ತಂದಿರೋ ಹಾಗಿದೆ. ಆತಂಕ ಬೇಡ ಭೈರಪ್ಪನವರೇ ಬನ್ನಿ ಇಬ್ಬರೂ ಸಾವಧಾನವಾಗಿ ರೊಟ್ಟಿ ರುಚಿ ನೋಡಿ. ಆಮೇಲೆ ನಿಮ್ಮ ಸಮಸ್ಯೆ ಏನಿದ್ರೂ ಅದಕ್ಕೆ ಪರಿಹಾರ ಹುಡುಕೋಣ'' ಅಂತ ಅವರಿಬ್ಬರನ್ನೂ ಉಪಹಾರಕ್ಕೆ ಆಹ್ವಾನಿಸಿದೆ. ತಿಂಡಿ ಆದ ಮೇಲೆ ಕಾಫಿ ಕುಡಿಯುತ್ತಾ ಕುಳಿತಾಗ ಭೈರಪ್ಪ ತಾವು ಬಂದ ಕಾರಣ ತಿಳಿಸಲು ಶುರುಮಾಡಿದರು.

‘‘ಶರಲೇಖ ಸರ್, ನಿಮಗೇ ತಿಳಿದಿರೋಹಾಗೆ ನಮ್ಮ ಕರ್ನಾಟಕದಲ್ಲಿ ಅಪರಾಧಗಳ ಸಂಖ್ಯೆ ದಿನದಿನಕ್ಕೂ ಏರುತ್ತಾ ಹೋಗುತ್ತಿದೆ. ಇದಕ್ಕೇನು ಪರಿಹಾರ ಅಂತ ನಾವು ನಾಲ್ಕು ಜನ ಹಿರಿಯ ಪೋಲೀಸ್ ಅಧಿಕಾರಿಗಳು ಒಟ್ಟುಗೂಡಿ ಚರ್ಚಿಸಿದೆವು. ಎರಡು ದಿನಗಳ ನಿರಂತರ ಚಿಂತನೆಯ ನಂತರ ಒಂದು ನಿರ್ಧಾರಕ್ಕೆ ಬಂದಿದ್ದೀವಿ. ಇದನ್ನ ಕಾರ್ಯಗತಗೊಳಿಸಕ್ಕೆ ನಿಮ್ಮ ಸಹಾಯ ಅತ್ಯಗತ್ಯ. ಹಾಗಾಗಿ ಇಲ್ಲಿ ಬಂದು ನಿಮಗೆ ತೊಂದರೆ ಕೊಡಬೇಕಾಯಿತು’’ ಎಂದರು ಇನ್‌ಸ್ಪೆಕ್ಟರ್ ಭೈರಪ್ಪ.

‘‘ಏನದು ನಿರ್ಧಾರ?’’ ಎಂದ ನಮ್ಮ ಮಿತಭಾಷಿ.

‘‘ಇಡೀ ಜಗತ್ತಿನಲ್ಲೇ ಅತ್ಯಂತ ಕಡಿಮೆ ಅಪರಾಧಗಳ ಸಂಖ್ಯೆ ಇರೋ ದೇಶ ಅಂದರೆ ಸಿಂಗಪುರ. ಹಾಗಾಗಿ ಅಲ್ಲಿನ ಪೋಲೀಸ್ ಇಲಾಖೆಗೆ ಹೋಗಿ ಅವರ ವಿಧಾನಗಳನ್ನು ವ್ಯಾಸಂಗ ಮಾಡುವ ಒಂದು ಸ್ಟಡಿ ಟೂರನ್ನು ಏರ್ಪಡಿಸಬೇಕು ಅಂತ ನಮ್ಮ ಅಭಿಪ್ರಾಯ. ನಿಮಗೆ ಅಲ್ಲಿನ ಪೋಲೀಸ್ ಇಲಾಖೆಯ ಮುಖ್ಯಸ್ಥರ ನಿಕಟ ಪರಿಚಯ ಇದೆ ಅಂತ ಉಳ್ಳಾಗಡ್ಡಿ ಹೇಳಿದರು. ಹಾಗಾಗಿ ನಿಮ್ಮಲ್ಲಿಗೆ ಬಂದಿದ್ದೇವೆ’’ ಅಂತ ಭೈರಪ್ಪ ಬಹು ಸ್ಪಷ್ಟವಾಗಿ ತಮ್ಮ ಅಹವಾಲನ್ನು ಶರಲೇಖನ ಮುಂದಿಟ್ಟರು.

ಅರೆ, ಇವರುಗಳು ಬರುಕ್ಕೆ ಸ್ವಲ್ಪ ಮುಂಚೆ ತಾನೇ ಇದೇ ವಿಷಯಾನ್ನ ಶರಲೇಖ ಪ್ರಸ್ತಾಪಿಸಿದ್ದು ಎಷ್ಟು ಕಾಕತಾಳೀಯ ಅಂದುಕೊಂಡೆ. ಶರಲೇಖನಿಗೆ ವಿಸ್ಮಯವಾದಂತೆ ಕಾಣಲಿಲ್ಲ, ಬಹು ಸೌಜನ್ಯದಿಂದ, ‘‘ಖಂಡಿತವಾಗಿ ಸಿಂಗಪುರದ ಪೋಲೀಸ್ ಕಮೀಷನರ್ ಝಿಕ್ವಾನ್ ಹತ್ತಿರ ಇಂದೇ ಮಾತನಾಡಿ ಎಲ್ಲಾ ವ್ಯವಸ್ಥೆ ಮಾಡುತ್ತೇನೆ. ನಾವಿಬ್ಬರೂ ಸಹ ನಿಮ್ಮೊಂದಿಗೆ ಬಂದು ಎಲ್ಲಾ ವ್ಯಾಸಂಗ ಸುವ್ಯವಸ್ಥಿತವಾಗಿರುವಂತೆ ನೋಡಿಕೊಳ್ಳುತ್ತೇವೆ. ಏನೂ ಯೋಚನೆ ಬೇಡ’’ ಅಂತ ಶರಲೇಖ ಹೇಳಿದ.

ಅತಿಥಿಗಳು ಬಹು ಸಂತೋಷದಿಂದ ಶರಲೇಖನಿಗೆ ತಮ್ಮ ಕೃತಜ್ಞತೆಗಳನ್ನು ತಿಳಿಸಿ ಹೊರಡಲು ಅನುವಾದರು. ಬಾಗಿಲಿನಿಂದ ಆಚೆ ಹೋಗುವಾಗ ಭೈರಪ್ಪ ಶರಲೇಖನನ್ನು ಕುರಿತು, ‘‘ಅಂದ ಹಾಗೆ ನಾವು ನಾಲ್ವರು ಅಧಿಕಾರಿಗಳು ಪ್ರವಾಸದಲ್ಲಿ ಬರುವ ಆಲೋಚನೆ ಇದೆ. ನಮ್ಮ ಫ್ಯಾಮಿಲಿಯನ್ನೂ ಕರೆತರಬಹುದಲ್ಲವೇ?’’ ಅಂತ ನಯವಾಗಿ ಕೇಳಿದರು.

ಶರಲೇಖ ಚಕಿತನಾದಂತೆ ಕಂಡಿತು. ‘‘ಫ್ಯಾಮಿಲಿ? ಓಹೋ ನಿಮ್ಮ ಪತ್ನಿಯರನ್ನು ಕರೆತರಬಹುದೋ ಅಂತ ಕೇಳುತ್ತಿದ್ದೀರಾ? ಅವರುಗಳೂ ಉನ್ನತ ಪೋಲೀಸ್ ಅಧಿಕಾರಿಗಳಾಗಿದ್ದರೆ ಖಂಡಿತ ಕರೆತರಬಹುದು. ಯಾವುದಕ್ಕೂ ನಿಮ್ಮ ನಾಲ್ಕು ಜನದ್ದೂ ಬಯೋಡೇಟಾ ಕಳಿಸಿ. ಝಿಕ್ವಾನ್ ಹತ್ತಿರ ಮಾತನಾಡಿದ ನಂತರ ನಿಮ್ಮ ಪ್ರಯಾಣದ ವ್ಯವಸ್ಥೆ ಮಾಡಬಹುದು’’ ಅಂತ ಹೇಳಿದ ಶರಲೇಖ. ಅಲ್ಲಾ ಈ ಪೋಲೀಸ್ ಅಧಿಕಾರಿಗಳ ಮೋಜಿನ ಪ್ರಯಾಣಕ್ಕೆ ಶರಲೇಖ ಯಾಕೆ ಸಹಾಯ ಮಾಡಬೇಕು ಎಂಬ ಪ್ರಶ್ನೆಗೆ ನನಗೆ ಉತ್ತರ ದೊರಕಲಿಲ್ಲ.

ಒಂದೆರಡು ವಾರಗಳ ತಯಾರಿ ನಡೆದ ಮೇಲೆ ನಾವುಗಳೆಲ್ಲಾ ಸಿಂಗಪುರದತ್ತ ವಿಮಾನದಲ್ಲಿ ಹೊರಟೆವು. ವಿಮಾನ ನಿಲ್ದಾಣದಲ್ಲಿ ನಮ್ಮನ್ನು ಆದರದಿಂದ ಸ್ವಾಗತಿಸಿದ

ಪೋಲೀಸ್ ಅಧಿಕಾರಿಯ ಶಿಸ್ತನ್ನು ನೋಡಿಯೇ ಶರಲೇಖನನ್ನು ಇಲ್ಲಿನ ಅಧಿಕಾರಿಗಳು ಯಾವ ಮಟ್ಟದಲ್ಲಿ ಗೌರವಿಸುತ್ತಿದ್ದಾರೆ ಎಂಬುದು ತಿಳಿಯುತ್ತಿತ್ತು. ಆತ ನೇರವಾಗಿ ನಮ್ಮನ್ನೆಲ್ಲಾ ಸಿಂಗಪುರದ ಪೋಲೀಸ್ ಅಕಾಡೆಮಿಗೆ ಕರೆದೊಯ್ದರು.

ಮಾರನೆಯ ಬೆಳಗ್ಗೆ ಸಿಂಗಪುರದ ಪೋಲೀಸ್ ಅಧಿಕಾರಿಗಳಿಂದ ಉಪನ್ಯಾಸ ಮತ್ತು ಪ್ರಾಕ್ಟಿಕಲ್ ನಿದರ್ಶನಗಳ ಸರಮಾಲೆಯೇ ನಮ್ಮ ಮುಂದೆ ತೆರೆದುಕೊಂಡಿತು... ಒಂದು ನಿಮಿಷ ಬಿಡುವಿಲ್ಲದಂತೆ ಇನ್ಸ್‌ಪೆಕ್ಟರ್ ಝಿಕ್ವಾನ್ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದ. ಎಲ್ಲವನ್ನೂ ದಾಖಲಿಸುವ ಉದ್ದೇಶದಿಂದ ನನ್ನನ್ನೂ ಆ ಸೆಮಿನಾರಿನಲ್ಲಿ ಭಾಗವಹಿಸುವಂತೆ ಶರಲೇಖ ಆಣತಿ ನೀಡಿದ್ದ.... ಅಬ್ಬಾ ಆ ಮೂರು ದಿನಗಳನ್ನು ನೆನೆದರೆ ಈಗಲೂ ನಗು ಬರುತ್ತದೆ. ನಮ್ಮ ಭೇಟಿಯ ಕೇವಲ ಕೆಲವೇ ನಿದರ್ಶನಗಳನ್ನು ಇಲ್ಲಿ ಹೇಳುತ್ತೇನೆ.

ಮೊದಲ ದಿನ ಬೆಳಗ್ಗೆ ಸಿಂಗಪುರದ ಪೋಲೀಸ್ ಅಧಿಕಾರಿ ಆರ್ಮುಗಂ ಪಿಳ್ಳೆ ಅವರಿಂದ ನಗರ ಸ್ವಚ್ಛತೆಯ ಬಗ್ಗೆ ಒಂದು ಲೆಕ್ಚರ್ ಡೆಮಾನ್ಸ್ಟ್ರೇಷನ್. ''ನಗರ ಸ್ವಚ್ಛತೆಯನ್ನು ಕಾಪಾಡಬೇಕಾದರೆ ಜನಗಳು ಹಾದಿ ಬೀದಿಗಳಲ್ಲಿ ಕಸ (ಲಿಟ್ಟರ್) ಹಾಕುವುದನ್ನು ತಪ್ಪಿಸಬೇಕು. ಅದೃಷ್ಟವಶಾತ್ ನಿನ್ನೆ ಸಿಟಿ ಸೆಂಟರಿನಲ್ಲಿ ಒಬ್ಬ ಒಂದು ಕಾಗದದ ಚೂರನ್ನು ಬಿಸಾಕಿದ್ದನ್ನು ನಮ್ಮ ಸಿ.ಸಿ. ಟಿ.ವಿ. ಕ್ಯಾಮೆರಾ ಸೆರೆಹಿಡಿದದ್ದರಿಂದ ಆ ಆಸಾಮಿಯನ್ನು ಹಿಡಿದು ಬಂಧಿಸಿದ್ದೇವೆ. ಇವತ್ತು ಅವನಿಗೆ ಶಿಕ್ಷೆ. ಅದನ್ನು ನಿಮಗೆ ತೋರಿಸುವುದರಿಂದ ಅದೊಂದು ಒಳ್ಳೆಯ ಪಾಠವಾಗಿ ನಿಮ್ಮ ದೇಶದಲ್ಲೂ ಅದನ್ನು ಜಾರಿಗೆ ತರುವ ಅವಕಾಶ ನಿಮಗೆ ಲಭ್ಯವಾಗುತ್ತದೆ. ಬನ್ನಿ ಅಲ್ಲಿಗೆ ಹೋಗುವ'' ಎಂದು ಹೇಳಿದ ನಂತರ ನಮಗಾಗಿಯೇ ಸಿದ್ಧವಾಗಿದ್ದ ವ್ಯಾನ್ ಒಂದನ್ನು ಹತ್ತಿದೆವು. ಆ ವ್ಯಾನ್ ನಮ್ಮನ್ನು ನೇರವಾಗಿ ಒಂದು ಫುಟ್‌ಬಾಲ್ ಮೈದಾನಕ್ಕೆ ಕರೆದೊಯ್ದಿತು. ಖಾಲಿ ಮೈದಾನದ ಒಂದು ಮೂಲೆಯಲ್ಲಿ ನಾವೆಲ್ಲಾ ನಿಂತೆವು. ಇನ್ನೊಂದು ಗೇಟಿನಿಂದ ಬಂದ ವ್ಯಾನಿನಲ್ಲಿ ಇಬ್ಬರು ಪೋಲೀಸರು ಅಪರಾಧಿಯನ್ನು ಹಿಡಿದು ತಂದಿದ್ದರು. ಸ್ವಲ್ಪ ಹೊತ್ತಿನಲ್ಲೇ ಸಿಮೆಂಟ್ ಮಿಕ್ಸರನ್ನು ಹೋಲುತ್ತಿದ್ದ ವಿಚಿತ್ರ ವಾಹನವೊಂದು ಗೇಟಿನ ಮೂಲಕ ಮೈದಾನವನ್ನು ಪ್ರವೇಶಿಸಿ ಮಧ್ಯದಲ್ಲಿ ನಿಂತಿತು. ನೋಡುತ್ತಿದ್ದಂತೆ ಇಬ್ಬರು ಸಮವಸ್ತ್ರಧಾರಿಗಳು ಅದರಿಂದ ಇಳಿದು ನೀರಿನ ಟ್ಯಾಂಕರುಗಳಿಗಿರುವಂತಹ ದಪ್ಪ ರಬ್ಬರ್ ಕೊಳವೆಯೊಂದನ್ನು ವಾಹನದ ಹಿಂಭಾಗಕ್ಕೆ ಜೋಡಿಸಿದರು. ಚಾಲಕ ಯಾವುದೋ ಸ್ವಿಚ್ಚನ್ನು ಆನ್ ಮಾಡಿದ. ತಕ್ಷಣ ಭರ್ರ್ರೋ ಎಂಬ ಶಬ್ಧ ಮಾಡುತ್ತಾ ರಬ್ಬರ್ ಕೊಳವೆಯಿಂದ ಕಾಗದದ ಚೂರುಗಳು ರಭಸದಿಂದ ಹಾರಾಡುತ್ತಾ ಹೊರಬಂದು ಮೈದಾನದ ಅರ್ಧಭಾಗವನ್ನು ತುಂಬಿದವು. ಪೋಲೀಸ್ ಅಧಿಕಾರಿ ಒಂದು ವ್ಹಿಸಲ್ ಊದಿದ ತಕ್ಷಣ ಅಪರಾಧಿ ಆ ಎಲ್ಲ ಚೂರುಗಳನ್ನೂ ಒಂದೊಂದಾಗಿ ಹೆಕ್ಕಿ ಚೀಲದಲ್ಲಿ ತುಂಬಲು ಪ್ರಾರಂಭಿಸಿದ. ಆರ್ಮುಗಂ ವಿವರಣೆ ನೀಡಲು ಶುರುಮಾಡಿದರು. ''ಪ್ರತಿ ನಾಲ್ಕು ಗಂಟೆಗಳಿಗೊಮ್ಮೆ ಅಪರಾಧಿಗೆ ಹತ್ತು ನಿಮಿಷಗಳ ವಿರಾಮ. ಸಂಜೆಯ ಹೊತ್ತಿಗೆ ಎಲ್ಲಾ ಚೂರುಗಳನ್ನು ಹೆಕ್ಕಿದ್ದರೆ ಮಾತ್ರ ಅವನಿಗೆ ಬಿಡುಗಡೆ. ಈ ಶಿಕ್ಷೆಯನ್ನು ವಿಡಿಯೋ ಚಿತ್ರಣ ಮಾಡಿ ತಿಂಗಳಿಗೊಮ್ಮೆ ಎಲ್ಲಾ ಶಾಲೆಗಳಲ್ಲೂ ಪ್ರದರ್ಶಿಸುವ ವ್ಯವಸ್ಥೆ ಇದೆ. ಇದರಿಂದ ಮಕ್ಕಳು ಚಿಕ್ಕವಯಸ್ಸಿನಿಂದಲೇ ಸ್ವಚ್ಛತೆಯ ಬಗ್ಗೆ ಆದ್ಯತೆ ಕೊಡುವ ಅಭ್ಯಾಸ ಆಗುತ್ತದೆ.''

ನಾನು ದಾಖಲಿಸಿರುವ ಇನ್ನೊಂದು ನಿದರ್ಶನವೆಂದರೆ ಕುಡಿದ ನಂತರ ಕಾರ್ ಚಾಲನೆ ನಡೆಸುವ ಅತ್ಯಂತ ಹೀನ ಅಪರಾಧ. ಇದನ್ನು ನಮಗೆ ವಿವರಿಸಿದ್ದು ಹ್ಯೂ ಛಿ ಎಂಬ ಅಧಿಕಾರಿ. ''ಕುಡಿದ ನಂತರ ಕಾರ್ ಚಾಲನೆ ಮಾಡುವುದು ನಮ್ಮ ದೇಶದಲ್ಲಿ ಒಂದು ಮಹಾಪರಾಧ. ಇದಕ್ಕೆ ನೀಡುವ ಶಿಕ್ಷೆಯನ್ನು ವಿಡಿಯೋ ಮೂಲಕ ಈಗ ನಿಮಗೆ ತೋರಿಸಲಾಗುವುದು. ಪ್ರಶ್ನೆಗಳೇನಿದ್ದರೂ ಪ್ರದರ್ಶನದ ನಂತರ ಕೇಳಬಹುದು'' ಎಂದು ಹೇಳಿ ಸಭಾಂಗಣದ ದೀಪಗಳನ್ನು ನಂದಿಸಿದರು. ಛಡಿ ಏಟಿನ ಬಗ್ಗೆ ನಾನು ಕೇಳಿದ್ದು ನಮ್ಮ ಪುರಾಣದ ಕತೆಗಳಲ್ಲಿ ಮಾತ್ರಾ. ಈ ವಿಡಿಯೋದಲ್ಲಿ ಕುಡಿದು ಕಾರ್ ಚಾಲನೆ ನಡೆಸಿದ ಚಾಲಕನಿಗೆ ಇಪ್ಪತ್ತು ಛಡಿ ಏಟುಗಳನ್ನು ಹೊಡೆದದ್ದನ್ನು ಅತ್ಯಂತ ಸ್ಪಷ್ಟವಾಗಿ ಚಿತ್ರೀಕರಿಸಿದ್ದರು. ಏಟುಗಳ ನಂತರ ನರ್ಸ್‌ಗಳು ಬಂದು ಅವನ ಗಾಯಗಳಿಗೆ ಚಿಕಿತ್ಸೆ ನೀಡಿದ್ದನ್ನೂ ಅಷ್ಟೇ ಸ್ಪಷ್ಟವಾಗಿ ನೋಡಿದೆವು. ಪ್ರಶ್ನೋತ್ತರ ಸಮಯದಲ್ಲಿ ಉಳ್ಳಾಗಡ್ಡಿ ಎದ್ದು ನಿಂತು ''ಶಿಕ್ಷೆ ಪಡೆದ ನಂತರ ಅಪರಾಧಿ ನಿಮ್ಮ ವಿರುದ್ಧ ಕೋರ್ಟ್‌ಗೆ ಹೋಗಲು ಸಾಧ್ಯವಿಲ್ಲವೇ?'' ಅಂತ ಕೇಳಿದರು. ಇದು ನಮ್ಮ ದೇಶದ ನ್ಯಾಯ ಸಂಹಿತೆಯಲ್ಲೇ ಇರುವುದರಿಂದ ಆ ಪ್ರಶ್ನೆಯೇ ಉದ್ಭವಿಸದು ಎಂಬ ಉತ್ತರ ಬಂತು.

ನಾನು ದಾಖಲಿಸಿದ ಕೊನೆಯ ಪ್ರಕರಣ ಸ್ವಲ್ಪ ತಮಾಷೆಯಿಂದ ಕೂಡಿತ್ತು. ಈ ಅಪರಾಧ ಎಂ.ಆರ್.ಟಿ. ಎಂಬ ಇಲ್ಲಿನ ಮೆಟ್ರೋ ಟ್ರೈನುಗಳಲ್ಲಿ ಹಿರಿಯ ಪ್ರಜೆಗಳಿಗಾಗಿ ಕಾದರಿಸಿದ ಸ್ಥಳದಲ್ಲಿ ಕಿರಿಯ ಪ್ರಜೆಯೊಬ್ಬನು ಕುಳಿತು ಕಾಯಿದೆ ಭಂಗಮಾಡುವುದನ್ನು ಕುರಿತದ್ದು. ಅಂತಹ ಅಪರಾಧಿಗೆ ನೀಡುವ ಶಿಕ್ಷೆಯ ಬಗ್ಗೆ ನಮ್ಮ ಅತಿಥೇಯರಾಗಿದ್ದ ಝಿಕ್ವಾನ್‌ರವರೇ ಉಪನ್ಯಾಸ ಪ್ರಾರಂಭಿಸಿದರು.

''ಹಿರಿಯ ಪ್ರಜೆಗಳು ನಮ್ಮ ಜನತೆಯ ಅಮೂಲ್ಯ ಆಸ್ತಿ. ಅಂತಹವರ ಜಾಗವನ್ನು ಕಸಿದು ಅವರು ನಿಲ್ಲುವಂತೆ ಮಾಡುವುದು ಅಕ್ಷಮ್ಯ ಅಪರಾಧ. ಇದಕ್ಕೆ ತಕ್ಕ ಶಿಕ್ಷೆಯನ್ನು ನಮ್ಮ ನ್ಯಾಯ ಸಂಹಿತೆ ನಿರ್ಧರಿಸಿದೆ. ಅದು ಏನಿರಬಹುದೆಂಬುದನ್ನು ಯಾರಾದರೂ ಹೇಳುವಿರಾ?'' ಎಂದು ಝಿಕ್ವಾನ್ ಒಂದು ಸವಾಲನ್ನು ಎಸೆದರು. ಸಭಿಕರಿಂದ ನಿರುತ್ತರ. ಕೊನೆಗೆ ಅವರೇ ಉತ್ತರಿಸಬೇಕಾಯಿತು.

''ನಾವು ನೀಡುವ ಶಿಕ್ಷೆ ಅಂದರೆ ದುರುಗುಟ್ಟಿಕೊಂಡು ನೋಡುವುದು. ಅಪರಾಧಿಯನ್ನು ಒಂದು ಕಡೆ ಕೂರಿಸಿ ಅವನ ಸುತ್ತ ನಾಲ್ಕು ಜನ ಅವನನ್ನೇ ಕೋಪದಿಂದ ದುರುಗುಟ್ಟಿ ನೋಡಲು ಶುರುಮಾಡುತ್ತಾರೆ. ಒಂದು ಅರ್ಧ ಘಂಟೆ ಆಗುವುದರೊಳಗೆ ಅಪರಾಧಿ ಸಾಕು ಸಾಕು ಎಂದು ಬೇಡಲು ಪ್ರಾರಂಭಿಸುತ್ತಾನೆ.......'' ಎಂದು ಝಿಕ್ವಾನ್ ಹೇಳುತ್ತಿದ್ದಂತೆ ಸಭಿಕರಲ್ಲಿದ್ದ ಭೈರಪ್ಪ ಪಕಪಕನೆ ನಗಲು ಪ್ರಾರಂಭಿಸಿದರು. ಆಮೇಲೆ, ಅವರೇ ಎದ್ದು ನಿಂತು ''ಸ್ವಾಮಿ, ಇದೆಂತಹ ಶಿಕ್ಷೆ? ಅಪರಾಧಿ ಒಂದು ಅರ್ಧ ಗಂಟೆ ಕಣ್ಣು ಮುಚ್ಚಿ ಕುಳಿತರೆ ಮುಗೀತು'' ಅಂದರು. ಝಿಕ್ವಾನ್ ಮುಗುಳ್ನಗೆ ನಕ್ಕು ''ಹಾಗಾದರೆ ನಮ್ಮ ನಾಲ್ಕು ಅಧಿ ಕಾರಿಗಳು ನಿಮ್ಮನ್ನು ಆ ಶಿಕ್ಷೆಗೆ ಗುರಿಪಡಿಸುತ್ತಾರೆ. ನೋಡೋಣ ನೀವು ಅದನ್ನು ಹೇಗೆ ನಿಭಾಯಿಸುತ್ತೀರಿ ಅಂತ'' ಎಂದು ಹೇಳಿ ಭೈರಪ್ಪನವರನ್ನು ಪಕ್ಕದ ಕೋಣೆಗೆ ಕಳುಹಿಸಿದರು. ಅವರು ಹಿಂದಕ್ಕೆ ಬಂದಾಗ ಒಂದು ಘಂಟೆ ಕಾಲ ಸರಿದಿತ್ತು. ಭೈರಪ್ಪ ಬೆವೆತಿದ್ದರು.

‘‘ನಿಜವಾಗ್ಲೂ ಮಾನಸಿಕ ಚಿತ್ರಹಿಂಸೆ ಅಂದ್ರೆ ಇದೇರೀ. ಇದನ್ನೆಲ್ಲಾ ಈ ದೇಶದಲ್ಲಿ ಕಂಡು ಹಿಡಿದಿದ್ದಾರಲ್ಲಾ’’ ಎಂದು ಉದ್ಗರಿಸಿ ಕುಳಿತರು.

ಅಂತೂ ಮೂರು ದಿನಗಳ ಸೆಮಿನಾರ್ ಮುಗಿದ ಸಂಜೆ, ಉಳ್ಳಾಗಡ್ಡಿ ಶರಲೇಖನತ್ತ ಬಂದರು. ನಾನೂ ಅಲ್ಲಿ ಕುಳಿತಿದ್ದೆ. ‘‘ಏನ್ರಪಾ, ಸ್ಟಡೀ ಟೂರ್ ಅಂದ್ರ ನೀವು ಹೀಂಗ ಮಾಡೂದು. ಒಂದು ಶಾಪಿಂಗ್ ಇಲ್ಲ, ಒಂದು ಮೋಜಿನ ಕ್ಲಬ್ ಇಲ್ಲ, ನನ್ನ ಸಹೋದ್ಯೋಗಿಗಳೆಲ್ಲಾ ಕಂಗಾಲಾಗಾಕ ಹತ್ಯಾರ. ನಾಳೆ ಮಧ್ಯಾಹ್ನದ ಫ್ಲೈಟಿಗೆ ಮುಂಚೆ ಮುಸ್ತಾಫಾ ಮಳಿಗೇಗಾದ್ರೂ ಒಂದು ವಿಜಿಟ್ ಏರ್ಪಾಟ್ ಮಾಡ್ರಲಾ ಸಿಂಗಪುರಕ್ಕ ಬಂದಿದಕ್ಕ ಏನಾದ್ರೂ ಖರೀದಿಸಿ ಪ್ರಯಾಣ ಮಾಡ್ಲಿ ಪಾಪದ ಮುಂಡೇವು’’ ಅಂತ ಗೋಗರೆದರು.

ಶರಲೇಖ ‘‘ನೋಡೋಣ’’ ಎಂದು ಹೇಳಿ ಸುಮ್ಮನಾದ.

ಮಾರನೆಯ ಬೆಳಗ್ಗೆ ಪೋಲೀಸ್ ವ್ಯಾನು ನಮ್ಮನ್ನೆಲ್ಲಾ ಲಿಟಲ್ ಇಂಡಿಯಾದಲ್ಲಿರುವ ಮುಸ್ತಾಫಾ ಅಂಗಡೀಗೆ ಕರೆದೊಯ್ಯಿತು. ಅಂಗಡಿಯ ಮ್ಯಾನೇಜರ್ ಸ್ವತಃ ಬಂದು ಎಲ್ಲರನ್ನೂ ತನ್ನ ಆಫೀಸಿಗೆ ಕರೆದುಕೊಂಡು ಹೋಗಿ ಷಾಪ್ ಲಿಫ್ಟರ್ಸ್ ವಿರುದ್ಧವಾಗಿ ಮಳಿಗೆಯಲ್ಲಿ ಅಳವಡಿಸಿರುವ ಕ್ಯಾಮೆರಾಗಳ ಬಗ್ಗೆ ಬಹು ವಿವರವಾಗಿ ತಿಳಿಸಿ, ಕಾಫಿ ಕೊಟ್ಟು ಪುನಃ ನಮ್ಮನ್ನು ವ್ಯಾನ್‌ಗೆ ಹತ್ತಿಸಿದ. ವ್ಯಾನ್ ವಿಮಾನ ನಿಲ್ದಾಣದತ್ತ ಹೊರಟಿತು. ನಮ್ಮ ಸುತ್ತ ಇದ್ದ ಕಂಗೆಟ್ಟ ಮುಖಾರವಿಂದಗಳನ್ನು ನೋಡಿ ಶರಲೇಖನ ಮುಖದಲ್ಲಿ ಸಂತೃಪ್ತಿಯ ನಗೆಯೊಂದು ಮಿಂಚಿ ಮಾಯವಾಯಿತು.

✵

---

## ಯಾರ್‍ಯಾರಿಗೆ ಯಾವ್ಯಾವ ಮಳೆ

ರೈತರಿಗೆ ನೀರಿನ ಮಳೆ
ಪ್ರೇಮಿಗಳಿಗೆ ಪ್ರೀತಿಯ ಮಳೆ
ರಾಜಕಾರಿಣಿಗಳಿಗೆ ದುಡ್ಡಿನ ಮಳೆ
ಸಾಹಿತಿಗಳಿಗೆ ಬರಹದ ಮಳೆ
ಭೋಜನ ಪ್ರಿಯರಿಗೆ ಊಟದ ಮಳೆ
ಮಕ್ಕಳಿಗೆ ಆಟದ ಮಳೆ
ಎಲ್ಲರಿಗೂ ಸುರಿಯುತ್ತಿರಲಿ
ನೆಮ್ಮದಿಯ ಮಳೆ

*– ಸುಕೇಶವ*




# ಮಳೆಗಾಲ ಎಂದರೆ...............!

**- ಬೇಲೂರು ರಾಮಮೂರ್ತಿ**

**ಮ**ಳೆಗಾಲ ಎಂದರೆ ಬಾಲ್ಯದಲ್ಲಿ ನಮಗೆಲ್ಲ ಛಳಿ ಹಿಡಿಸುತ್ತಿದ್ದ ದಿನಗಳು. ನಾವೆಲ್ಲ ಮಳೆಯನ್ನು ಆನಂದಿಸುತ್ತಿದ್ದೆವು. ಮೋಡಕಟ್ಟಿ ಒಂದೆರಡು ಹನಿ ಹಾಕಿತು ಎಂದರೆ ಬಾರೋ ಬಾರೋ ಮಳೆರಾಯ, ಬಾಳೆಯ ತೋಟಕೆ ನೀರಿಲ್ಲ ಬಾರೋ ಬಾರೋ ಮಳೆರಾಯ ತೆಂಗಿನ ತೋಟಕೆ ನೀರಿಲ್ಲ ಅಂತ ನಾವೆಲ್ಲ ಕುಣಿದು ಕುಪ್ಪಳಿಸಿ ಹಾಡುತ್ತಿದ್ದೆವು. ಆದರೆ ಮಳೆ ಬದುಕನ್ನು ಒಂದು ರೀತಿ ನಿಷ್ಕ್ರಿಯಗೊಳಿಸಿಬಿಡುತ್ತಿತ್ತು ಅಂತ ಅನಿಸುತ್ತಿತ್ತು. ಸುಮಾರು ಐವತ್ತು ವರ್ಷಗಳ ಹಿಂದಿನ ಮಲೆನಾಡನ್ನು ಊಹಿಸಿಕೊಳ್ಳಿ. ನಮ್ಮೂರಲ್ಲಿ ಆಗ ಇದ್ದುದ್ದು ಸುಮಾರು ನೂರಿನ್ನೂರು ಮನೆಗಳು. ಯಾರ ಮನೆಯಲ್ಲೂ ರೇಡಿಯೋ ಇಲ್ಲ, (ಟಿವಿ ಮಾತಂತೂ ಕೇಳಿರಲೇ ಇಲ್ಲ) ಪೇಪರ್ ತರಿಸೋರ ಮನೆ ಕಡಿಮೆಯೇ. ಸಾಮಾನ್ಯ ದಿನಗಳಲ್ಲಿ ಹರಟೆ ಹೊಡೆಯೋಕೆಂದು ಮನೆಮನೆಗೆ ಬರುತ್ತಿದ್ದವರು, ಮಳೆಗಾಲದಲ್ಲಿ ಅವರವರ ಮನೆಯೊಳಗೇ ಬಂಧಿತರು.

> **ಐವತ್ತು ವರ್ಷಗಳ ಹಿಂದೆ ಮಲೆನಾಡಿನಲ್ಲಿ ಒಮ್ಮೆ ಮಳೆ ಬಂದಾಗ ಕಳ್ಳ ಸಿಕ್ಕಿಬಿದ್ದಿದ್ದ. ಆದರೆ....**

ನಮ್ಮೂರಲ್ಲಿ ಹುಚ್ಚು ಮಳೆಯೇ ಬರ್ತಿತ್ತು. ನಮ್ಮ ತಂದೆ ಅವರ ಸಮಕಾಲೀನರ ಜೊತೆ ಕೂತು ಜಗಲಿಯಲ್ಲಿ ಮಾತಾಡುತ್ತಾ ಚಿತ್ತೆ ಮಳೆ ಮೊದಲನೇ ಪಾದ ಇವತ್ತು ಮಧ್ಯಾಹ್ನ ಮೂರು ಗಂಟೆಗೆ ಹುಟ್ಟುತ್ತೆ. ಸಂಜೆ ಜೋರು ಮಳೆ ಇರುತ್ತೆ ಅಂತ ಪಂಚಾಂಗ ನೋಡಿಯೇ ಹೇಳೋರು. ಅವರುಗಳೇ ನಿಜವಾದ ಮಳೆ ಮುನ್ಸೂಚನೆ ನೀಡೋರು. ಅದು ನಿಜವೂ ಆಗ್ತಿತ್ತು. ಚಿತ್ತೆ ಮಳೆಗೆ ನಮ್ಮ ಕಡೆ ಕುರುಡು ಚಿತ್ತೆ ಅನ್ನೋರು. ಯಾಕಂದ್ರೆ ಮಳೆ ಶುರುವಾಗಿಬಿಟ್ಟರೆ ಕಣ್ಣುಮುಚ್ಚಿಕೊಂಡು ಹೊಡೀತಾ ಇರೋದು. ನಾನಂತೂ ನಮ್ಮೂರಲ್ಲಿ ಸುಮಾರು ಮೂರು ದಿನ ಒಂದೇ ಸಮ ಮಳೆ ಹೊಡೆದಿದ್ದನ್ನು ಕಂಡಿದ್ದೀನಿ, ಅನುಭವಿಸಿದ್ದೀನಿ. ಶಾಲೆಗೆ ಹೋಗೋದು ಕಷ್ಟ, ಅಂಗಡಿಗೆ ಹೋಗೋದು ಕಷ್ಟ, ಎಲ್ಲಕ್ಕಿಂತ ಹೆಚ್ಚಾಗಿ ಆಟ ಆಡೋದು ಕಷ್ಟ. ರೈನ್ ಕೋಟ್ ಇಲ್ಲದ ಕಾಲ. ಮನೇಲಿ ಒಂದೇ ಛತ್ರಿ. ಅದನ್ನು ನಾನು ಶಾಲೆಗೆ ತಗೊಂಡು ಹೋಗಿಬಿಟ್ಟರೆ ಮನೇಲಿ ಇನ್ಯಾರಿಗಾದರೂ ಛತ್ರಿ ಬೇಕಾದರೆ ಏನು ಮಾಡೋದು. ಅದಕ್ಕೆ ಯಾರ ಜೊತೆಲಾದರೂ ಅವರ ಛತ್ರೀಲಿ ಶಾಲೆಗೆ ಹೋಗಬೇಕು.

ಹಾಕಿಕೊಂಡಿರೋ ಬಟ್ಟೆ ಒದ್ದೆಯಾದರೂ ಪರವಾಗಿಲ್ಲ ಪುಸ್ತಕ ನೆನೆಯಬಾರದು. ಪ್ರೈಮರಿ ಶಾಲೆಯಲ್ಲಿ ಓದುತ್ತಿರುವಾಗ ಸ್ಲೇಟು ಬಳಪ ಇತ್ತು. ಹೋಂ ವರ್ಕನ್ನು ಸ್ಲೇಟಿನಲ್ಲಿ ಬರೆದು ತಗೊಂಡು ಹೋಗಬೇಕಿತ್ತು. ರಾತ್ರಿ ಹೋಂ ವರ್ಕ್ ಮಾಡಿ ಅದನ್ನು ಹಗುರವಾಗಿ ಗೋಡೆಗೆ ಒರಗಿಸಿ ಇಡುತ್ತಿದ್ದೆ. ಮಳೆಗಾಲದಲ್ಲಿ ಸ್ಕೂಲಿಗೆ ಹೋಗೋವರೆಗೂ ಮಳೆ ಬರದಿರಲಪ್ಪ ಅಂತ ದೇವರಲ್ಲಿ ಕೇಳಿಕೊಳ್ಳುತ್ತಿದ್ದೆ. ಸಣ್ಣಗೆ ಮಳೆ ಹನಿತಾ ಇದ್ರೂ ಸ್ಕೂಲಿಗೆ ಹೋಗೋದು ಕಷ್ಟ ಸ್ಲೇಟನ್ನು ಹೊಟ್ಟೆಗೆ ಒರಗಿಸಿಕೊಂಡು ಹುಷಾರಾಗಿ ಹೋಗಬೇಕು. ಯಾವ ಹುಡುಗನನ್ನೂ ರೇಗಿಸಬಾರದು, ಜಗಳ ಆಡಬಾರದು. ಹಾಗೇನಾದರೂ ಮಾಡಿದರೆ ಅವನು ಸ್ಲೇಟಿನ ಮೇಲೆ ಕೈಯಾಡಿಸಿ ಬರೆದಿರೋದನ್ನು ಅಳಿಸಿಬಿಟ್ಟರೆ ಕ್ಲಾಸಿನಲ್ಲಿ ಸ್ಟಾಂಡ್ ಅಪ್ ಆನ್ ದಿ ಬೆಂಚ್ ಶಿಕ್ಷೆ ಗ್ಯಾರಂಟಿ.

ಆದರೆ ಮಳೆಗಾಲ ಎಂದರೆ ಸಖತ್ ತಿನ್ನೋ ಮಜ ಇರ್ತಿತ್ತು. ಅದಕ್ಕಾದರೂ ಮಳೆಗಾಲವನ್ನು ನಿರೀಕ್ಷೆ ಮಾಡುತ್ತಿದ್ದೆವು. ಮಾಮೂಲಿ ತಿಂಡಿ ಊಟದ ಜೊತೆಗೆ ಹಪ್ಪಳ, ಸಂಡಿಗೆ, ಬಾಳಕದ ಮೆಣಸಿನಕಾಯಿ ಇವುಗಳ ಸಂಭ್ರಮ. ಮನೆಯಲ್ಲಿ ಹಿರಿಯರು ಛಳಿ ಇರೋ ದಿನಗಳಲ್ಲಿ ಬೇಕಾಗುತ್ತೆ ಅಂತ ಇಂಥವುಗಳನ್ನೆಲ್ಲ ಮಾಡಿ ಶೇಖರಿಸಿಟ್ಟಿರುತ್ತಿದ್ದರು. ಸಂಜೆಯಾಯಿತೆಂದರೆ ಕುರುಕಲು ತಿಂಡಿಗಳು. ಮನೇಲೆ ಕೋಡುಬಳೆ ಚಕ್ಕುಲಿ, ತೇನ್ಕೊಳಲು, ರವೆಉಂಡೆ ಇವುಗಳು ಮನೆಮಾಡಿರುತ್ತಿದ್ದವು. ಅಕ್ಕಪಕ್ಕದ ಮನೆಯವರೂ ಸೇರಿಕೊಂಡು ಐದಾರು ಹೆಂಗಸರು ಅವರವರ ಮನೆಗಳಿಗೆ ಆಗೋಷ್ಟು ಹಪ್ಪಳ, ಸಂಡಿಗೆ, ಕೋಡುಬಳೆ ಚಕ್ಕುಲಿಗಳನ್ನು ಕರಿಯುತ್ತಿದ್ದರು. ಅದನ್ನು ಡಬ್ಬ ತುಂಬಿಸಿಬಿಟ್ಟರೆ ಹೋಗ್ತಾ ಬರ್ತಾ ನಮಗೆ ತಿನ್ನೋದೇ ಕೆಲಸ. ಒಂದು ಶಾಲನ್ನೋ, ಕಂಬಳಿಯನ್ನೋ, ಇಲ್ಲಾ ನಮ್ಮಮ್ಮನ ಸೀರೆಯನ್ನೋ ಹೊದ್ದು ಮೂಲೇಲಿ ಕೂತು ತಿಂಡಿ ಮೇಯೋದು ಅಂದ್ರೆ ಅಷ್ಟಿಷ್ಟ ಎಲ್ಲ ಸರಿ ನಮಗೆ ಮಳೆಗಾಲದಲ್ಲಿ ತುಂಬಾ ಬೇಜಾರಾಗುತ್ತಿದ್ದುದು ಎಂದರೆ ಬಹಿರ್ದೆಸೆಗೆ ಹೋಗಬೇಕಾದ ಸಂದರ್ಭಗಳಲ್ಲಿ. ಚಿಕ್ಕ ವಯಸ್ಸಿನಲ್ಲಿ ಸಮಯ ಸಿಕ್ಕಾಗಲೆಲ್ಲ ಹೊಟ್ಟೆ ತುಂಬಿಸಿಕೊಳ್ಳೋದೇ ಕೆಲಸವಾಗಿರುತ್ತಿತ್ತು. ಹೀಗಾಗಿ ಯಾವಾಗ ಅವಸರವಾಗುತ್ತೆ ಅಂತ ಗೊತ್ತಾಗ್ತಾ ಇರಲಿಲ್ಲ. ಯಾವಾಗಂದರೆ ಅವಾಗ ಅವಸರವಾಗಿ ಹೋಗಲೇಬೇಕಾಗುತ್ತಿತ್ತು. ಜೋರು ಮಳೆ ಬರ್ತಿದೆ ಎಂದರೆ ತಾಪತ್ರಯವೇ. ಆಗೆಲ್ಲ ಈಗಿನ ಹಾಗೆ ಅಟ್ಯಾಚ್ಡ್ ಟಾಯ್ಲೆಟ್ ಇರುತ್ತಿರಲಿಲ್ಲ. ಟಾಯ್ಲೆಟ್ ಏನಿದ್ದರೂ ಹಿತ್ತಲಿನಲ್ಲಿ ಅರ್ಧ ಕಿಲೋಮೀಟರು ದೂರದಲ್ಲಿ ಇರುತ್ತಿತ್ತು. ಒಂದು ಕೈಲಿ ಛತ್ರಿ ಹಿಡಿದುಕೊಂಡು, ಅಥವಾ ದಪ್ಪ ಟವಲು ಹೊದ್ದುಕೊಂಡು ಇನ್ನೊಂದು ಕೈಲಿ ಚೊಂಬು ಹಿಡಿದುಕೊಂಡು ಹೋಗಬೇಕಿತ್ತು. ಹಗಲು ಹೊತ್ತು ಹೇಗಾದರೂ ಸರಿ. ಆದರೆ ಸರಿರಾತ್ರೀಲಿ ಅವಸರವಾಗಿಬಿಟ್ಟಾಗ ಮಾತ್ರ ತಾಪತ್ರಯ.

ರಸ್ತೇಲಿ ಮನೆಗಳು ಒಂದೇ ಸಾಲಿನಲ್ಲಿ ಇರೋ ಹಾಗೆ ಮನೆ ಹಿಂದುಗಡೆ ಟಾಯ್ಲೆಟ್‌ಗಳೂ ಒಂದೇ ಸಾಲಿನಲ್ಲಿ ಇರೋದು. ದೂರದಿಂದಲೇ ಅದು ಶಾಮರಾಯರ ಮನೆ ಟಾಯ್ಲೆಟ್ಟು, ಅಲ್ಲಿ ಕಾಣೋದು ಸುಬ್ಬಣ್ಣನವರ ಮನೆ ಟಾಯ್ಲೆಟ್ಟು ಅಂತ ಗುರುತು ಹಿಡಿದು ಹೇಳೋರು. ಟಾಯ್ಲೆಟ್‌ಗಳು ಓಪನ್ ಟು ಏರ್. ಮೂರು ಕಡೆ ತಡಿಕೆ ಹಾಕಿ ಮುಚ್ಚಿ ಇನ್ನೊಂದು ಕಡೆ

ತಡಿಕೆಯದೇ ಬಾಗಿಲು. ಬೇಕಾದರೆ ಆಕಾಶ ನೋಡಿಕೊಂಡು ಬಹಿರ್ದೆಸೆ ಕೆಲಸ ಮುಗಿಸೋ ಸುಖ.

ರಾತ್ರಿ ಒಂದು ಹೊತ್ತಿನಲ್ಲಿ ಜೋರು ಮಳೆ. ಆಗ ಬಹಿರ್ದೆಸೆಗೆ ಅವಸರವಾಗಿಬಿಟ್ಟರೆ ನನಗೆ ಒಬ್ಬನೇ ಹೋಗಲು ಭಯ ಅಮ್ಮನನ್ನು ಎಬ್ಬಿಸಬೇಕು. ಅವಳು ಮಲ್ಕೊ ಬೆಳಕಾಗ್ಲಿ ಅನ್ನೋಳು. ನನಗೋ ತಡೆಯೋಕೆ ಆಗ್ತಿರಲಿಲ್ಲ. ಪಾಪ ಅವಳಿಗೆ ನಿದ್ದೆ. ನನ್ನ ಜೊತೆ ಹಿತ್ತಲಿಗೆ ಬರಬೇಕು. ನನ್ನದು ಮುಗಿಯುವವರೆಗೂ ಮಳೇಲಿ ನೆನೀತಾ ನಿಂತಿರಬೇಕು. ಆಗೆಲ್ಲ ಮನೆಗಳಲ್ಲಿ

ಟಾರ್ಚ್ ಕೂಡಾ ಇರ್‍ತಿರಲಿಲ್ಲ. ಸೀಮೆ ಎಣ್ಣೆ ಬುಡ್ಡಿ ಇಲ್ಲ ಲಾಟೀನು ತಗೊಂಡು ಹೋಗಬೇಕು. ಥತ್ ಹಾಳಾದ್ದು ರಾತ್ರಿ ಯಾಕಪ್ಪಾ ಅವಸರವಾಗುತ್ತೆ ಅಂತ ತುಂಬಾ ಬೇಜಾರಾಗೋದು. ನಾಳೆಯಿಂದ ಕಡಿಮೆ ತಿನ್ನಬೇಕು ಇಲ್ಲ ಮಲ್ಕೊಳೋ ಮುಂಚೆ ಎಲ್ಲ ಮುಗಿಸಿಕೊಂಡು ಮಲ್ಕೊಬೇಕು ಅಂತ ಅನಿಸಿದರೂ ಮರುದಿನ ಅದೆಲ್ಲ ಮರೆತೇ ಹೋಗಿರೋದು.

ಒಂದು ಮಹತ್ತರವಾದ ಸಂಗತಿ ನಿಮಗೆ ನಾನು ಹೇಳಲೇಬೇಕು. ಏನಂದ್ರೆ, ಮಳೆಗಾಲ ಪ್ರಾರಂಭವಾದ ಒಂದೆರಡು ದಿನಗಳಲ್ಲಿ ನಮ್ಮ ಬೀದಿಯಲ್ಲೇ ಇರೋ ಸ್ವಾಮಿನಾಥನ್ ಅನ್ನೋರ ಮನೇಲಿ ಕಳ್ಳತನ ಆಯಿತು. ಕಳ್ಳ ಅದು ಹೇಗೋ ಹಿಂದಿನ ಬಾಗಿಲಿನಿಂದ ಮನೆಯೊಳಗೆ ನುಗ್ಗಿ ಕೈಗೆ ಸಿಕ್ಕಿದ್ದನ್ನು ದೋಚಿಕೊಂಡು ಹೋಗಿದ್ದ. ಪೊಲೀಸಿನವರು ಬಂದರು ಎಲ್ಲ ಪರೀಕ್ಷೆ ಮಾಡಿಕೊಂಡು ಹೋದರು. ಕಳ್ಳ ಇನ್ನೂ ಪತ್ತೆಯಾಗಿರಲಿಲ್ಲ. ಆದ್ದರಿಂದ ಆ ಬೀದಿಯವರೆಲ್ಲ ತುಂಬಾ ಹುಷಾರಾಗಿದ್ದರು. ಅವತ್ತು ಜೋರು ಮಳೆ. ಬೆಳಗ್ಗೆ ಹಿಡಿದದ್ದು ಬಿಟ್ಟಿರಲೇ ಇಲ್ಲ. ನಿಕರೆ ಕೋಡಿ ಬಿತ್ತಂತೆ, ಪೇಟೆ ಬೀದೀಲಿ ನೀರು ಹರಿದು ಹೋಗ್ತಿದೆಯಂತೆ, ತಗ್ಗಿನ ಮನೆಯೊಳಕ್ಕೆಲ್ಲ ನೀರು ನುಗ್ಗಿದೆಯಂತೆ ಅನ್ನೋ ವಿಚಾರ ಬಾಯಿಂದ ಬಾಯಿಗೆ ಹರಿಯಿತು. ಸರಿ ರಾತ್ರಿಯಾಯಿತು. ಎಲ್ಲರ ಮನೆಯಲ್ಲೂ ಊಟ ಆಗಿ ಮಲಗೋ ಸಮಯ. ಶಾಮಣ್ಣ ಹಿತ್ತಲ ಬಾಗಿಲು ಹಾಕ್ಲೇನೇ ಅಂತ ಹೆಂಡತೀನ ಕೇಳಿ ಇನ್ನೇನು ಬಾಗಿಲು ಹಾಕಬೇಕು ಅನ್ನುವಾಗ ಸ್ವಾಮಿನಾಥನ್ ಮನೆ ಹಿತ್ತಲಿನಲ್ಲಿ ಬೆಳಕು ಕಂಡಿತು. ಆ ಬೆಳಕು ಅತ್ತ ಇತ್ತ ಸರಿದಾಡುತ್ತಿತ್ತು. ಶಾಮಣ್ಣ ಅದನ್ನು ಗಮನಿಸಿದರು. ಒಡನೆಯೇ ಪಕ್ಕದ ಮನೆಯ ಪದ್ಮನಾಭನನ್ನು ಕರೆದುಕೊಂಡು ಬಂದು ತೋರಿಸಿದರು. ನೋಡಿ ಯಾರೋ ಕಳ್ಳ, ಬಹುಶಃ ಈ ಹಿಂದೆ ಬಂದಿದ್ದ ಕಳ್ಳನೇ ಮತ್ತೆ ಹೊಂಚು ಹಾಕಿಕೊಂಡು ಬಂದಿದಾನೆ. ಈ ಸಾರಿ ಅವನನ್ನು ಬಿಡಬಾರದು ಅಂತ ಅಂದುಕೊಂಡರು. ಅಕ್ಕಪಕ್ಕದ ಮನೆಯವರಾದ ಸೂರಿ, ಬಾಬು, ಸೀನಣ್ಣ ಎಲ್ಲರನ್ನೂ ಕರೆದರು. ಅವರೆಲ್ಲರ ಬಾಯಿ ಮಾತಾಡಲಿಲ್ಲ, ಕಣ್ಣೇ ಮಾತಾಡಿತು. ಪ್ಲಾನ್ ಸಿದ್ಧವಾಯಿತು. ಎಲ್ಲರೂ ತಲೆಮೇಲೆ ಕರೀ ಕರ್ಚೀಫು ಹಾಕಿಕೊಂಡು ಸದ್ದು ಮಾಡದಂತೆ ಮಳೆಯಲ್ಲಿ ನೆನೆಯುತ್ತಲೇ ಹಿತ್ತಲಿಗೆ ಹೊರಟರು. ಆಗೆಲ್ಲ ಯಾರ ಮನೆಗೂ ಕಾಂಪೌಂಡ್ ಇರಲಿಲ್ಲ ಒಬ್ಬರ ಮನೆಯ ಹಿತ್ತಲಿನಿಂದ ಇನ್ನೊಬ್ಬರ ಮನೆಯ ಹಿತ್ತಲಿಗೆ ಸಲೀಸಾಗಿ ಹೋಗಬಹುದಿತ್ತು. ಸ್ವಾಮಿನಾಥನ್ ಮನೆ ಹಿತ್ತಲಿನಲ್ಲಿ ಬೆಳಕು ಹರಿದಾಡುತ್ತಲೇ

ಇತ್ತು. ಕತ್ತಲಿನಲ್ಲಿ ಅದು ಯಾರು ಅಂತ ಕಾಣುತ್ತಿರಲಿಲ್ಲ. ಶಾಮಣ್ಣ ಮೆತ್ತಗೆ ಹೇಳಿದರು. ಹಿಂದಿನಿಂದ ಹೋಗಿ ಒಂದೇಟು ಹಾಕಿಬಿಡೋಣ. ನಂತರ ಎಲ್ಲರೂ ಸೇರಿ ಅವನನ್ನು ಕಟ್ಟಿಹಾಕಿಬಿಡೋಣ ಅಂದರು. ಅದೇ ರೀತಿ ಕಾರ್ಯಪ್ರವೃತ್ತರಾಗೋ ಹೊತ್ತಿಗೆ ಮಳೆ ಜೋರಾಯಿತು. ಬೆಳಕು ಬೇಗ ಬೇಗ ಹರಿಯುತ್ತಾ ಸ್ವಾಮಿನಾಥನ್ ಮನೆ ಹಿತ್ತಲ ಬಾಗಿಲ ಕಡೆ ಹೊರಟಿತು. ಈಗ ತಡಮಾಡಬಾರದು ಅಂತ ಶಾಮಣ್ಣ ಕಳ್ಳನ ತಲೆಗೆ ಒಂದೇಟು ಬಿಟ್ಟರು. ಅಯ್ಯಮ್ಮಾ ಅಂತ ಕಳ್ಳ ಕೆಳಕ್ಕುರುಳಿದ. ಅವನ ಕೈಯಲ್ಲಿದ್ದ ಬುಡ್ಡಿ ಆರಿಹೋಗಿ ಸಖತ್ ಕತ್ತಲಾಯಿತು. ಮಳೆ ಒಂದೇ ಸಮನೆ ಹೊಡೀತಾ ಇತ್ತು. ನಾಲ್ಕು ಜನರೂ ಅವನನ್ನು ಕಟ್ಟಿಹಾಕಿ ಅವನನ್ನು ಹೊತ್ತುಕೊಂಡು ಹೋಗುವಷ್ಟರಲ್ಲಿ ಎಲ್ಲರೂ ನೆನೆದು ತೊಪ್ಪೆಯಾಗಿದ್ದರು. ಕತ್ತಲೆಯಲ್ಲಿಯೇ ಸ್ವಾಮಿನಾಥನ್ ಮನೆ ಹಿತ್ತಲ ಬಾಗಿಲ ಹತ್ತಿರ ಬಂದು ಅವರನ್ನು ಕೂಗೋಣ ಅಂತ ಬಾಗಿಲಿಗೆ ಕೈ ಇಟ್ಟಾಗ ಅದು ತೆರೆದುಕೊಂಡಿತು. ಅಯ್ಯೋ ಇನೊಬ್ಬ ಕಳ್ಳ ಆಗಲೇ ಮನೆ ಹೊಕ್ಕಿದಾನೆ ಅಂತ ಅನಿಸಿತು. ಸದ್ದು ಮಾಡದೇ ಒಳಗೆ ಹೊರಟರು. ವರಾಂಡದಲ್ಲಿ ಸ್ವಾಮಿನಾಥನ್ ಹೆಂಡತಿ ಮಲಗಿದ್ದರು. ಹೆಜ್ಜೆ ಸದ್ದು ಕೇಳಿದೊಡನೇ ಅವರು ಕಣ್ಣೇ ಬಿಡದೇ, ಎನ್ನ ಇವಳ ನೇರ ಪಣ್ಣಟ್ಟಿಂಗಳೇ, ಮಳೆ ರೊಂಬ ವಂದ್ಕೊಂಡಿಕ್ಕರ್ನ, ಸರಿ ತೂಂಗುಂಗೋ ಅನ್ನುತ್ತಾ ಹೊರಳಿದರು. ಶಾಮಣ್ಣ ''ರೀ, ಅಲಮೇಲಮ್ಮ ನಿಮ್ಮನೆ ಹಿತ್ತಲಿನಲ್ಲಿ ಕಳ್ಳ ಬಂದಿದ್ದ. ಈ ಹಿಂದೆ ಕಳ್ಳತನ ಮಾಡಿದವನೇ ಇರಬೇಕು. ಅವನನ್ನು ಹಿಡಿದು ಕಟ್ಟಿಹಾಕಿದೀವಿ ಎಲ್ಲಿ ಸ್ವಾಮಿನಾಥನ್ನು'' ಅಂತ ಕೇಳಿದರು. ಅಲಮೇಲಮ್ಮ ಸಿಡಿಲು ಬಡಿಸಿಕೊಂಡವರಂತೆ ಎದ್ದರು. ಪಕ್ಕದಲ್ಲಿ ಯಾರೂ ಇಲ್ಲ. ''ಏನು ಕಳ್ಳನಾ, ಸಿಕ್ಕಿದನಾ ಎಲ್ಲಿ'' ಅಂದರು. ''ಅಲ್ಲಿ ಹೊರಗಡೆ ಜಗಲಿ ಮೇಲೆ ಮಲಗಿಸಿದೀವಿ ಬನ್ನಿ ನೋಡುವಿರಂತೆ, ಸರಿ ಎಲ್ಲಿ ಸ್ವಾಮಿನಾಥನ್ನು'' ಅಂತ ಕೇಳಿದಾಗ ಅಲಮೇಲಮ್ಮ ಅವರು ''ಬಹಿರ್ದೆಸೆಗೆ ಅಂತ ಹಿತ್ತಲ ಕಡೆ ಹೋಗಿ ತುಂಬಾ ಹೊತ್ತಾಯಿತು. ಅಲ್ಲೇ ಕೂತು ತೂಕಡಿಸುತ್ತಿದ್ದಾರೋ ಏನೋ. ಈಗೊಂದೆರಡು ತಿಂಗಳ ಹಿಂದೆ ಬಹಿರ್ದೆಸೆಗೆ ಅಂತ ಹೋದೋರು ಏನೋ ಯೋಚನೆ ಮಾಡ್ತಾ ಕಣ್ಣು ಮುಚ್ಚಿದ್ದರಂತೆ, ಅವರಿಗೆ ತೂಕಡಿಕೆ ಬರಲಿಲ್ಲ ನಿದ್ದೆಯೇ ಬಂದುಬಿಡ್ತಂತೆ'' ಅಂತ ಲಾಟೀನು ಕೈಲಿ ಹಿಡಿದ ಅಲಮೇಲಮ್ಮ ಗಾಬರಿಯಿಂದ ಹೊರಗೆ ಬಂದು ಹಿತ್ತಲ ಕಡೆ ಮಲಗಿಸಿದ್ದವನ ಬಳಿ ಲಾಟೀನು ಹಿಡಿದು ನೋಡ್ತಾರೆ, ಅವರಿಗೆ ಗುಂಡಿಗೆಯೇ ಒಡೆದುಹೋಗೋ ಹಾಗಾಯ್ತು. ಜೊತೆಗೆ ಎಲ್ಲರೂ ಗಾಬರಿಯಾದರು. ''ರೀ, ಶಾಮಣ್ಣ, ಇವರ್ನ ಯಾರು ಅಂತ ಅಂದ್ಕೊಂಡ್ರೀ ನಮ್ಮ ಯಜಮಾನರೇ ಕಣ್ರೀ, ಇವರ ಗುರುತು ನಿಮಗೆ ಸಿಗಲಿಲ್ವೇನ್ರೀ ಇವರನ್ನ ಯಾಕ್ರೀ ಕಟ್ಟಿಹಾಕಿದೀರಾ. ಮೊದಲು ಕಟ್ಟು ಬಿಚ್ರೀ'' ಅಂದರು. ಸ್ವಾಮಿನಾಥನ್ ಜೊತೆಗೆ ಎಲ್ಲರೂ ಮಳೇಲಿ ತೊಪ್ಪೆ ಆಗಿದ್ದರು. ಸ್ವಾಮಿನಾಥನ್ ಕಟ್ಟನ್ನು ಬಿಡಿಸಿಕೊಳ್ಳಲಾರದೇ ಒದ್ದಾಡುತ್ತಿದ್ದರು. ಬಾಯಿಗೆ ಬಟ್ಟೆ ಬೇರೆ ತುರುಕಿಬಿಟ್ಟಿದ್ದರು. ಅರೇ ಇದೇನಾಯ್ತು ನಮಗೆ ಸ್ವಾಮಿನಾಥನ್ ಗುರುತು ಸಿಗಲೇ ಇಲ್ವಲ್ಲ ಅಂತ ಎಲ್ಲರೂ ಆತಂಕಗೊಂಡರು. ಎಲ್ಲ ಆದ ಮೇಲೆ ಸ್ವಾಮಿನಾಥನ್ ''ನಿಮಗೆಲ್ಲ ಮಾನ ಮರ್ಯಾದೆ ಇದೆಯೇನ್ರೀ'' ಅಂದರೆ ಅವರ ಬಾಯಿಂದ ಮಾತಿನ ಧ್ವನಿಯೇ ಹೊರಡಲಿಲ್ಲ. ''ಏನ್ರೀ

ಬಹಿರ್ದೆಸೆಗೆ ಹೋದೋರ್ನ ಕಳ್ಳ ಅಂತ ಕಟ್ಟಿಹಾಕಿ ಕರ್ಕೊಂಡು ಬಂದಿದೀರಲ್ಲ ನಿಮಗೆಲ್ಲ ಏನು ಹೇಳೋಣ'' ಅಂದರು ಅಲಮೇಲಮ್ಮ. ''ನಮಗೆ ಕತ್ತಲಿನಲ್ಲಿ ಬರೀ ಲಾಟೀನು ಮಾತ್ರ ಕಾಣುತ್ತಿತ್ತು. ಲಾಟೀನು ಅತ್ತ ಇತ್ತ ಓಲಾಡುತ್ತಿತ್ತು. ಕಳ್ಳ ಇಲ್ಲೇ ಹೊಂಚು ಹಾಕ್ತಾ ಇದಾನೆ ಅಂತ ನಾವು ಹಿಂದಿನಿಂದ ಅವನ ತಲೆಮೇಲೆ ಹೊಡೆದುಬಿಟ್ಟೆವು'' ಅಂತ ಪದ್ಮನಾಭ್ ವಿವರಣೆ ಕೊಟ್ಟರು.

ಆ ಮಳೆಯಲ್ಲಿಯೇ ಡಾಕ್ಟರು ಬಂದು ಸ್ವಾಮಿನಾಥನ್ ಅವರನ್ನು ಪರೀಕ್ಷೆ ಮಾಡಿದರು. ಡಾಕ್ಟರು ಇವರಿಗೆ ಷಾಕ್ ಆಗಿರೋದರಿಂದ ಮಾತು ನಿಂತುಹೋಗಿದೆ. ಕ್ರಮೇಣ ಬರುತ್ತೆ ಏನೂ ಆತಂಕ ಪಟ್ಕೊಬೇಕಾಗಿಲ್ಲ ಅಂದರು. ಶಾಮಣ್ಣನಾದಿಯಾಗಿ ಎಲ್ಲರೂ ಅಲಮೇಲಮ್ಮನವರಲ್ಲಿ ಕ್ಷಮೆ ಕೇಳಿ ಹೊರಟರು. ಡಾಕ್ಟರೂ ಹೊರಡೋ ಮುನ್ನ ಅಲಮೇಲಮ್ಮನವರ ಬಳಿ ನಿಂತು ''ಇವರಿಗೆ ಮಾತು ಬರೋದು ಇನ್ನೂ ತಡವಾಗಿರೋದ್ರಿಂದ ನಿಮಗೆ ಇವರ ಮೇಲೆ ಇರುವ ಸೇಡನ್ನೆಲ್ಲಾ ಚೆನ್ನಾಗಿ ಬೈದು ತೀರಿಸಿಕೊಂಡುಬಿಡಿ. ನೀವು ಬೈದರೆ ಅವರು ತಿರುಗಿ ಬೈಯ್ಯೋ ಸ್ಥಿತಿಯಲ್ಲಿಲ್ಲ. ನೀವು ಬೈದದ್ದು ಅವರಿಗೆ ಅರ್ಥವಾಗೊಲ್ಲ ಆದರೆ ಬೈದಿದ್ದರ ತೃಪ್ತಿ ನಿಮಗೆ ಇರುತ್ತೆ'' ಅಂದರು. ಅಲಮೇಲಮ್ಮ ತುಟಿ ಅಂಚಿನಲ್ಲಿ ನಗುತ್ತಾ ನೀವು ಹೇಳೋದೂ ಕರಕ್ಟು ಅಂದರು.

ಎಲ್ಲರೂ ಹೋದ ಮೇಲೆ ಡಾಕ್ಟರು ಹೇಳಿದ್ದನ್ನು ಟ್ರೈ ಮಾಡೋಣ ಅಂತ ಗಂಡನ ಮುಖ ನೋಡುತ್ತಾ ''ಉಂಗಳಿಕೆ ಎನ್ನ ಕೊಂಚವೂ ಮೈ ಮೇಲೆ ಪ್ರಜ್ಞೆಯೇ ಇಕ್ಷಿಲ್ಯಾ, ಅವಂಗಳೆಲ್ಲ ಸೇತ್ತು ಉಂಗಳಿಕೆ ಅಡಿಚ್ಚಿ ಪೋಟ್ಟಿಟ್ಟಿರ್ಕ್ಯಾ, ನೀಂಗಳ್ ಎನ್ನ ಅಪ್ಪಡಿ ಕೊರಂಗು ಮಾದರಿ ಪಾತ್ಕೊಂಡಿರಿಂದಿಂಗಳಾ, ಉಂಗಳ್ ಮುಖಕ್ಕೆ, ನೀಂಗ್ ಪಣ್ಣಿರೋ ಕಾರ್ಯತ್ತಿಕ್ಕೆ ರೆಂಡು ದಿನ ಉಪವಾಸ ಪೋಡ್ರೆ'' ಅಂತ ಹೇಳ್ತಾ ಇದ್ರೆ ಪಾಪ ಸ್ವಾಮಿನಾಥನ್ ತಿರುಗಿ ಮಾತಾಡಲಾರದೇ ಅಸಹಾಯಕರಾಗಿ ಅಲಮೇಲಮ್ಮನ ಕಡೆ ನೋಡಿ ಕಾಫಿ ಕುಡು ಅಂತ ಕೊರಲಿದರು. ಸ್ವಲ್ಪ ಕಡಿಮೆಯಾಗಿದ್ದ ಮಳೆ ಜೋರು ಗುಡುಗು ಸಿಡಿಲಿನೊಂದಿಗೆ ಮತ್ತೆ ಶುರುವಾಯಿತು.

---

## ಮುಂಗಾರಿಲ್ಲದ ಮಳೆ

ಮಳೆಯೇ ಇಲ್ಲ
ನಮ್ಮೂರಿನಲ್ಲಿ ನೆನೆಯುವುದಕ್ಕೆ
ಆದರೆ ಗುಡುಗಿನ ನೆನಪಿಗೆ ಇದೆ
ನಮ್ಮವರ ಗೊರಕೆ

*– ಆರತಿ ಘಟಿಕಾರ, ದುಬೈ*



# ಪ್ರತಿಕ್ರಿಯೆ

**- ವರುಣಾನಂದ**

**ಆಟೋ ಡ್ರೈವರ್:** ಮಳೆಗಾಲದಲ್ಲಿ ನಿಮ್ಮ ಸೇವೆ ಮಾಡಲು ಸದಾ ಸಿದ್ಧ. ನಮಗೆ ಖುಷಿ ಸಹ. ನೀವು ಮೀಟರ್ ಕಡೆ ಗಮನ ಕೊಡದಿದ್ದರೆ ಸಾಕು.

**ಬಿಬಿಎಂಪಿ ಕಂಟ್ರಾಕ್ಟರ್:** ನಾವೇ ನಿರ್ಮಿಸಿದ ರಸ್ತೆಗಳಲ್ಲಿ ಮಳೆಗಾಲದಲ್ಲಿ ಕಂಡು ಬರುವ ಪಾಟ್‌ಹೋಲ್‌ಗಳನ್ನು ರಿಪೇರಿ ಮಾಡಲು ನಾವು ಯಾವಾಗಲೂ ತಯಾರು.

**ಜ್ಯೋತಿಷಿ:** ತುಂಬಾ ಜೋರಾಗಿ ಮಳೆ ಬರುತ್ತೆ ಎಂದು ಟಿವಿ ಚರ್ಚೆಯೊಂದರಲ್ಲಿ ಹಿಂದೆಯೇ ಹೇಳಿದ್ದೆ. ಅದನ್ನು ಯಾರೂ ಗಂಭೀರವಾಗಿ ಪರಿಗಣಿಸಿದಂತೆ ಕಾಣಲಿಲ್ಲ.

**ಜಯಲಲಿತಾ:** ನಿಮ್ಮಲ್ಲಿ ಯಥೇಚ್ಛವಾಗಿ ನೀರಿದ್ದಾಗ ನಾವು ಕೇಳುವುದೇ ಇಲ್ಲ. ನಿಮ್ಮಲ್ಲಿ ಇಲ್ಲದಾಗಲೇ ನಾವು ಕೇಳುವುದು ಎಂಬುದನ್ನು ಕನ್ನಡಿಗರು ಅರ್ಥ ಮಾಡಿಕೊಂಡರೆ ಸಾಕು.

**ಸದಾನಂದಗೌಡ:** ಅತಿವೃಷ್ಟಿ ಪರಿಹಾರದ ಬಗ್ಗೆ ಯಡ್ಯೂರಪ್ಪನವರ ಜತೆ ಏನೂ ಭಿನ್ನಾಭಿಪ್ರಾಯವಿಲ್ಲ. ಪಕ್ಷದಲ್ಲೂ ಏನೂ ಗೊಂದಲವಿಲ್ಲ. ಅದೆಲ್ಲ ಮಾಧ್ಯಮದವರ ಸೃಷ್ಟಿ ಆದರೆ ಪ್ರಾರ್ಥನೆ, ಹವನ ಹೋಮಗಳು ಹೆಚ್ಚಾದರೆ ಮಳೆಯೂ ಹೆಚ್ಚಾಗುವ ಭೀತಿ ಇದೆ. ಇದನ್ನು ಕೆಲವರು ಅರಿಯಬೇಕು.

**ಸಿದ್ದರಾಮಯ್ಯ:** ಮಳೆ ಕುರಿತು ನಮ್ಮ ಪಕ್ಷದವರು ನನ್ನ ಜತೆ ಚರ್ಚೆ ಮಾಡದಿರುವ ಬಗ್ಗೆ ಈಗಾಗಲೇ ಹೈ ಕಮಾಂಡ್‌ಗೆ ದೀರ್ಘ ಪತ್ರ ಬರೆದಿದ್ದೇನೆ. ದೆಹಲಿಗೂ ಹೋಗಿ ಮಾತುಕತೆ ನಡೆಸಲಿದ್ದೇನೆ.

**ಕುಮಾರಸ್ವಾಮಿ:** ಈಗಾಗಲೇ ಆಗಿರುವ ಹಾನಿ ಬಗ್ಗೆ ನನ್ನ ಬಳಿ ದಾಖಲೆಗಳಿವೆ. ಅದನ್ನು ಸೂಕ್ತ ಸಮಯದಲ್ಲಿ ಬಿಡುಗಡೆ ಮಾಡುವೆ ಎಂದು ಈ ಸಮಯದಲ್ಲಿ ನಾನು ಹೇಳಲಿಕ್ಕೆ ಬಯಸುತ್ತೇನೆ.

**ಹವಾಮಾನ ತಜ್ಞರು:** ಮಳೆ ಬರಿಸುವುದು ನಿಲ್ಲಿಸುವುದು ನಮ್ಮ ಕೈಲಿಲ್ಲ ಎಂದು ಜನ ಅರಿಯಬೇಕು.

**ವಾಟಾಳ್ ನಾಗರಾಜ್:** ಮಳೆ ಹೆಚ್ಚಿದ್ದಾಗ ಅಥವಾ ಕಡಿಮೆ ಆದಾಗ ನಾನು ಪ್ರತಿಭಟನೆ ನಡೆಸಲು ತಯಾರು. ಪ್ರತಿಭಟನೆ ನಡೆಸಲು ಹೊಸ ಹೊಸ ಐಡಿಯಾಗಳು ಕೊಡಿ ಎಂದು ಈ ಮೂಲಕ ಜನರಲ್ಲಿ ವಿನಂತಿಸುತ್ತೇನೆ.

**ಟ್ರಾಫಿಕ್ ಪೊಲೀಸ್:** ಮಳೆಯಿಂದಾಗುವ ಟ್ರಾಫಿಕ್ ಜಾಮ್‌ಗಳಿಗೆ ನಮ್ಮನ್ನು ಹೊಣೆ ಮಾಡಬಾರದು.

**ಗಣಿಧಣಿಗಳು:** ಜೈಲಿನಲ್ಲಿದ್ದರೆ ಮಳೆ ಎಂಜಾಯ್ ಮಾಡಲು ಆಗುವುದಿಲ್ಲ.

**ಶ್ರೀರಾಮುಲು:** ಮಳೆಯಲ್ಲೂ ಪಾದಯಾತ್ರೆ ಮಾಡಲು ನಾನು ತಯಾರು.

**ಸಿನಿಮಾ ತಾರೆ:** ಸೆಟ್ ಮೇಲೆ ಮಳೆ ಬಂದಾಗ ಟ್ರಾಫಿಕ್ ಸಮಸ್ಯೆ ಇರುವುದಿಲ್ಲ.

✵

---

## ಮಳೆ ಬಂದರೆ...

ಜಡಿ ಮಳೆಯ ಕಾಲವಾದರೆ ಎಲ್ಲ ಕಡೆಗಳಿಂದಲೂ ನೀರು ಸುರಿಯುವುದು; ಜಿನುಗುವುದು. ಎಲ್ಲಿ ನೋಡಿದರೂ ಪಾತ್ರೆಗಳೇ, ಬಟ್ಟೆಗಳೇ, ಗೋಣಿತಾಟೇ, ಕೆಸರೇ. ಇರಬಹುದಾದದ್ದೆಲ್ಲ ಹೊರಕ್ಕೆ ಬರುವುದು. ಥಿನ್, ಥಿಕ್, ಥನ್, ಥಿನಕ್, ತ್ರಿಕ್ ಎಂದು ಇಪ್ಪತ್ತೆರಡು ಶೃತಿಗಳಲ್ಲಿಯೂ ಮೂರು ಕಾಲದ ತಾಳಗಳಲ್ಲಿಯೂ ಮಾಳಿಗೆ ತೊಟ್ಟಿಡುವುದು. ಹುಡುಗರು, ದೊಡ್ಡವರು ವಿರಾಮವಿಲ್ಲದೇ, ನೀರನ್ನು ಹಿಂಡುತ್ತಿರುವುದೇ, ಒರಸುತ್ತಿರುವುದೇ ನಿರಂತರ ಕೆಲಸ. ಒಟ್ಟಿಗೆ ಒಂದು ಚದರಡಿ ಪ್ರದೇಶ ಒಣಗಿರದು. ಮನೆಯೆಲ್ಲ ತಂಡಿ, ಮಕ್ಕಳಿಗೆ ತಲೆನೋವು, ನೆಗಡಿ, ಕೆಮ್ಮು. ಒಂದೊಂದು ಮೂಲೆಯಲ್ಲಿ ಒಬ್ಬೊಬ್ಬರು ಗೂಡರಿಸಿಕೊಂಡು ಕುಳಿತಿರುತ್ತಾರೆ. ದೊಡ್ಡ ಮಳೆ ಬಂದರೆ ಹಾಗಲ್ಲ ಅದೆ ರೀತಿ ಬೇರೆ, ವೈಭವ ಬೇರೆ. ನೆಲದ ಮೇಲೆ ತಿಳಿಯಾಗಿ ಹನಿ ಬೀಳುತ್ತಿರಲು ಬಿದ್ದ ಮಳೆಯನ್ನು ಅಟ್ಟಿ ಗುಡಿಸಿಕೊಂಡು ಹೋಗುವ ಗಾಳಿಯ ತಿದಿ ಬೀಸು ಎಲ್ಲಕ್ಕಿಂತಲೂ ಚೆನ್ನ. ಒಬ್ಬರ ಕೆಳಗೈ ಇನ್ನೊಬ್ಬರ ಮುಂಗೈಯನ್ನು ಪ್ರೀತಿಯಿಂದ ಬಯಸುವ ಸಮಯ ಅದು.

*(ವೀ.ಸೀ. ಅವರ ಮಳೆ ಲೇಖನದಿಂದ)*




# ಬೆಂಗಳೂರಿನ ಮುಂಗಾರು....!

**- ಎಚ್. ಗೋಪಾಲಕೃಷ್ಣ**

**ಬೆಂ**ಗಳೂರಿನಲ್ಲಿಯೇ ಹುಟ್ಟಿ ಬೆಳೆದವರಿಗೆ ಮುಂಗಾರೂ ಒಂದೇ ಹಿಂಗಾರೂ ಒಂದೇ.. ಹಾಗೆ ನೋಡಿದರೆ ಇಲ್ಲಿನವರಿಗೆ ಮಳೆ ಬಂದರೂ ಅದೇ ಬರದೇ ಇದ್ದರೂ ಅದೇ ಸ್ಥಿತಿ. ಏಪ್ರಿಲ್, ಮೇ ತಿಂಗಳಿನಲ್ಲಿ ಬೇಸಿಗೆ ಬಿಸಿ ಹೆಚ್ಚಾದಾಗ ಅಯ್ಯೋ ಬಿಸೀನಪ್ಪಾ ತಡೆಯಕ್ಕೇ ಆಗದು: ಏನು ಬೇಸಿಗೆ, ಹಾಳಾದ್ದು ಬೆಂಗಳೂರು ಹಾಳಾಗಿ ಹೋಯಿತು ಅಂತ ಅಲವತ್ತುಕೊಳ್ಳುತ್ತಾರೆ. ಮಳೇ ಬಂತೋ, ಅದೂ ಎರಡು ದಿವಸ ಬಿಡದೇ ಸುರೀತೋ ಇವರ ಪಾಡು ಯಾರಿಗೂ ಬೇಡ. ಇಡೀ ನಗರದ ಎಲ್ಲೆಡೆ ಮಳೆ ನೀರು ತುಂಬಿಕೊಂಡುಬಿಡುತ್ತೆ. ಕೊಂಚ ತಗ್ಗಿರೋ ಮನೆಗಳಿಗೆ ಗಲೀಜು ನೀರೂ ಸೇರಿಕೊಂಡು ಒಳನುಗ್ಗಿ ಮನೆಯ ಒಳಭಾಗ ಮತ್ತೊಂದು ವೃಷಭಾವತಿ ನದಿಯ ತುಣುಕಾಗಿ ಬಿಡುತ್ತೆ. ಬೆಂಗಳೂರಿನ ಕೊಚ್ಚೆ ಮತ್ತು ಗೃಹ ಕಲ್ಮಶಗಳು ಸೇರಿ ಹರಿಯುವ ನೀರಿಗೆ ವೃಷಭಾವತಿ ಅಂತ ಹೆಸರು. ಮೊದಲು ಅಂದರೆ ಈಗ ಸುಮಾರು ಸಾವಿರ ವರ್ಷಗಳ ಹಿಂದೆ ವೃಷಭಾವತಿ ನದಿಯ ನೀರನ್ನು ಜನ ಕುಡಿಯಲು ಉಪಯೋಗಿಸುತ್ತಾ ಇದ್ದರಂತೆ! ಆದರೆ ಅದಕ್ಕೆ ಗಲೀಜು ನೀರಿನ ಸೇರ್ಪಡೆಯಾದನಂತರ ಅದು ಬೆಂಗಳೂರಿನ ಎಲ್ಲಾ ನಾಗರಿಕ ಸಮಾಜಗಳ ಮನೆ ಹಿಂಭಾಗದಲ್ಲಿ ಪ್ರಯಣಿಸಿ, ಸ್ಲಮ್ಮುಗಳ ಒಳಹೊಕ್ಕು ಬಯಲಿನಲ್ಲಿ ಹರಿದು ಕೆಂಗೇರಿ ಬಳಿ ಒಂದು ಮಿನಿ ಜಲಪಾತ ನಿರ್ಮಿಸಿ ನಗರದಿಂದ ಹೊರಹೋಗುತ್ತದೆ. ಈ ಭಾಗವನ್ನು ದಾಟ ಬೇಕಾದರೆ ಬೆಂಗಳೂರಿಗರು ಅಸಹ್ಯಪಟ್ಟುಕೊಂಡು ಮೂಗು ಮುಚ್ಚಿಕೊಂಡು ಸುಗಂಧಭರಿತ ಈ ಒಂದು ಕಿಲೋಮೀಟರು ಅಂತರದಲ್ಲಿ ಗಾಡಿಯನ್ನು ವೇಗವಾಗಿ ಓಡಿಸಿ ನಿಭಾಯಿಸುತ್ತಾರೆ. ಈಚೆಗೆ ಫ್ಲೈ ಓವರುಗಳ ಕಟ್ಟುವಿಕೆ ಶುರುವಾದ ನಂತರ ವೇಗವಾಗಿ ಗಾಡಿ ಓಡಿಸಿ ಕೆಟ್ಟಗಾಳಿಯಿಂದ ತಪ್ಪಿಸಿಕೊಳ್ಳುವ ಬೆಂಗಳೂರಿಗನ ಆಸೆಗೂ ತಣ್ಣೀರು ಚೆಲ್ಲಿದೆ! ಮಳೆ ಬಂದಾಗ ನಮ್ಮ ಊರಿನ ಕಾರ್ಪೊರೇಷನ್ನು, ನಮ್ಮ ಮಂತ್ರಿಗಳು ಈ ಮಳೆಗಾಲ ಮುಗಿದಕೂಡಲೇ ಚರಂಡಿಗಳನ್ನು ಶುದ್ಧ ಮಾಡಿಬಿಟ್ಟು ಹೂಳು ತೆಗೆಸಿ ಫಸ್ಟ್ ಕ್ಲಾಸ್ ಆಗಿ ಕ್ಲೀನು ಮಾಡಿಸಿಬಿಡ್ತೀವಿ, ಮುಂದಿನ ಮಳೆಗಾಲಕ್ಕೆ ನೋಡಿ ನಿಮಗೆ ಈ ತಾಪತ್ರಯವೇ ಇರಲ್ಲ ಅಂತ ಹೇಳಿಬಿಡುತ್ತಾರೆ. ಎಲ್ಲಾ ಸರಿಹೋಗುತ್ತೆ, ನಮ್ಮೂರು ಸ್ವರ್ಗವೇ ಆಗಿಬಿಡುತ್ತೆ ಅಂತ ನಾವೂ ಕಾಯ್ತೀವಿ. ಮುಂದಿನ

ಮಳೆಗೆ ಇದೇ ಪಾಡು ಪುನರಾವೃತ್ತವಾಗುತ್ತೆ. ನಾನು ನೋಡಿದ ಹಾಗೆ ಸುಮಾರು ಸಾವಿರ ವರ್ಷಗಳಿಂದ ಇದು – ಮಳೆನೀರು ಮನೆಗಳಿಗೆ ನುಗ್ಗೋದು ನಮ್ಮ ಮಂತ್ರಿಗಳು ಆಶ್ವಾಸನೆ ನೀಡೋದೂ, ಮುಂದಿನ ಮಳೆಗಾಲ ಸುಖವಾಗಿರುತ್ತೆ ಅಂತ ನಾವು ನಂಬೋದೂ – ನಡೆದುಕೊಂಡು ಬರುತ್ತಲೇ ಇದೆ. ಇದೇನು ಅಷ್ಟೊಂದು ನಿಖರವಾಗಿ ನೀವು ಹೀಗೆ ಹೇಳ್ತಿದ್ದೀರೀ ಅಂತ ನೀವು ಕೇಳತೀರೀ ಅಂತ ನನಗೆ ಗೊತ್ತು. ಸಾರ, ನಾನು ಹುಟ್ಟಿದಾಗಲಿಂದಲೂನೂ ಇಲ್ಲೇ ಇರೋನು, ನಾನು ಹುಟ್ಟಿದ್ದು ಇಲ್ಲೇ ವಾಣಿ ವಿಲಾಸ ಆಸ್ಪತ್ರೆಯ ಏಳನೇ ವಾರ್ಡಿನಲ್ಲಿ ಅಂತ ನನ್ನ ಸಮಜಾಯಿಷಿ! ನನಗೂ ಸಾವಿರ ಆಗಿರಬಹುದು, ವಾಣಿ ವಿಲಾಸಕ್ಕೂ ಅಷ್ಟೇ ಆಗಿದ್ಯೇನೋ! ನಮ್ಮ ತಾತ, ಮುತ್ತಾತ ಅವರ ಮುತ್ತಾತ ಎಲ್ಲರೂ ನಮ್ಮ ಬೆಂಗಳೂರಿನ, ಕಾರ್ಪೊರೇಷನ್ನಿನ ಸ್ವಾರಸ್ಯಕರ ಕಥೆಗಳನ್ನು ಹೇಳಿಕೊಂಡು, ಕೇಳಿಕೊಂಡು ನಾಟಕವಾಡಿಕೊಂಡು, ತಮಾಷೆ ಮಾಡಿಕೊಂಡು ಬೆಳೆದರು ರೀ ಯಪ್ಪಾ...

ಜೂನ್ ತಿಂಗಳಿನಲ್ಲಿ ಬರುವ ಮಳೆ ಮುಂಗಾರು ಮಳೆ ಇರಬಹುದು ಎಂದು ನನ್ನಂಥಹವರ ನಂಬಿಕೆ.ಇದಕ್ಕೆ ನಮಗೆ ಯಾವ ಪುರಾವೆಗಳೂ ಇಲ್ಲ! ಯಾಕೆ ಅಂದರೆ ಯಾವ ಹುಟ್ಟಾ ಬೆಂಗಳೂರಿಗನೂ ಮುಂಗಾರಿನ ಬಗ್ಗೆ ಬರೆದಿರುವುದು ದಾಖಲೆ ಇಲ್ಲ ! ಪೇಪರಿನವರು ಮತ್ತು ಮಂತ್ರಿಗಳು ಮುಂಗಾರು ಶುರುವಾಗುತ್ತೆ ಅಂತಲೋ ಮೋಡ ಬಿತ್ತನೆ ಮಾಡಬೇಕು ಅಂದಾಗಲೋ ನಮಗೆ ಮುಂಗಾರಿನ ಮುನ್ಸೂಚನೆ ಸಿಗುತ್ತೆ. ಅಂದ ಹಾಗೆ ಇಲ್ಲಿ ಬೆಂಗಳೂರಿನಲ್ಲಿ ನಾವು ಯಾರೂ ಆಕಾಶವನ್ನು ನೋಡುವುದೇ ಇಲ್ಲ; ಅದು ಕಾಣಿಸಿದರೆ ತಾನೇ ನೋಡುವುದಕ್ಕೆ. ಅಕಸ್ಮಾತ್ ಅದು ಕಾಣಿಸಿದರೂ ಅದು ನಮ್ಮ ಗಮನಕ್ಕೂ ಬಂದಿರುವುದಿಲ್ಲ.

ಜೂನಿನ ಮಳೆಯ ಬಗ್ಗೆ ಹೇಳಬೇಕು ಅಂದರೆ ಅದೇ ಆಗ ತಾನೇ ಏಪ್ರಿಲ್ಲು ಮೇ ತಿಂಗಳುಗಳ ಬಿಡು ಬೇಸಿಗೆ ನಮ್ಮನ್ನ ಹುರಿದು ಮುಕ್ಕಿಬಿಟ್ಟಿರುತ್ತೆ. ಅದರಲ್ಲೂ ಈ ಬಿಸಿಲು ಹೆಚ್ಚಿರುವ ದಿವಸಗಳಲ್ಲೇ ನಮಗೆ ಕರೆಂಟೂ ಇರುಲ್ಲ. ಇಡೀ ಬೆಂಗಳೂರು ಒಂದು ಸೊಳ್ಳೆ ಉತ್ಪಾದನಾ ಸೆಂಟರು ಅಂತ ಸುಮಾರು ಜನಕ್ಕೆ ಗೊತ್ತಿದೆಯೋ ಇಲ್ಲವೋ. ಎಲ್ಲರ ಮನೇಲೂ ರಾತ್ರಿ ಹೊತ್ತು ಫ್ಯಾನು ತಿರುಗಿದರೇ ನಿದ್ದೆ. ಫ್ಯಾನಿನಲ್ಲಿ ಗಾಳಿ ಬರದೇ ಇದ್ದರೂ ಫ್ಯಾನಿನ ಗಿರಗಿರ ಶಬ್ಧಕ್ಕೆ ಅಭ್ಯಾಸವಾಗಿ ಜೋಕಾಲಿ ಹೊಡೆಯುತ್ತಾರೆ ಬೆಂಗಳೂರಿಗರು. ಕರೆಂಟು ಇಲ್ಲವಾದಲ್ಲಿ ಫ್ಯಾನು ತಿರುಗದು ಮತ್ತು ಇಡೀ ರಾತ್ರಿ ನಿದ್ದೆಯೂ ಇರದು. ಇಡೀ ರಾತ್ರಿ ಸರ್ಕಾರವನ್ನು ಕಾರ್ಪೊರೇಟರುಗಳನ್ನು ತಮ್ಮ ಹಣೆಬರಹವನ್ನು ಆಯ್ದ ಅತ್ಯಂತ ಕೆಟ್ಟ ಶಬ್ದಗಳಲ್ಲಿ ನಿಂದಿಸುತ್ತಾ ಬೈಯುತ್ತಾ ಸೊಳ್ಳೆಗಳನ್ನು ಹೊಡೆಯುತ್ತಾ ಕಳೆಯುತ್ತಾರೆ. ಸರ್ಕಾರೀ ಕಛೇರಿಗಳಿಗೋ, ವಿಧಾನಸೌಧಕ್ಕೋ ಫ್ಯಾಕ್ಟರಿಗಳಿಗೋ ಕೆಲಸಕ್ಕೆ ಹೋಗುವವರು ಹಗಲಿನ ಹೊತ್ತು ಅಲ್ಲೇ ನೆತ್ತಿಯ ಮೇಲೆ ತಂಪಾಗಿ ಫ್ಯಾನು ಹಾಕಿಕೊಂಡು ಕಡಿಮೆಯಾದ ರಾತ್ರಿ ನಿದ್ದೆಯ ಕೋಟಾ ಮುಗಿಸಿಬಿಡುತ್ತಾರೆ. ಆದರೆ ಪಾಪ ಇಂಥಹಕಡೆ ನೌಕರಿ ಸಿಕ್ಕಿರದ ಮತ್ತು ಮನೆಯಲ್ಲೇ ಇರುವ ಗೃಹಿಣಿಯರ ಪಾಡು ಕೇಳುವವರೇ ಇಲ್ಲ. ಅದರಿಂದ ಗೃಹಿಣಿಯರು ಮಧ್ಯಾಹ್ನದ ಸಮಯ

ನಿದ್ದೆ ಹೊಡೆವುದುಂಟು. ಬೆಂಗಳೂರಿನಲ್ಲಿ ನೋಡಿ, ಬೇಸಿಗೆಯಲ್ಲಿಯೇ ಹಾಡು ಹಗಲು ಕಳ್ಳತನಗಳು ಆಗುವುದು ಹೆಚ್ಚು, ಯಾವುದೇ ಪೇಪರು ತೆಗೆಯಿರಿ, ಯಾವುದೇ ಟಿವಿ9 ಅನ್ನು ನೋಡಿ – ಅದರಲ್ಲೆಲ್ಲಾ ಹಾಡುಹಗಲು ನಡೆವ ಕಳ್ಳತನಗಳದ್ದೇ ಸುದ್ದಿ. ಇದಕ್ಕೆ ಕಾರಣ ಇದೂ – ಅಂದರೆ ಗೃಹಿಣಿಯರು ಹಗಲು ನಿದ್ದೆ ಮಾಡುವುದು ಸಹ ಅಂತ ನನ್ನ ಅನಿಸಿಕೆ. ಇನ್ನು ಕಾಲೇಜಿಗೆ ಸ್ಕೂಲಿಗೆ ಹೋಗುವ ಮಕ್ಕಳೋ ಅವೂ ಸಹ ಕಾಲೇಜು ಸ್ಕೂಲಿನಲ್ಲಿ ನಿದ್ದೆ ಕೋಟ ಮುಗಿಸಬಹುದು – ಪಕ್ಕದ ಪಾರ್ಕಿಗೆ ಗೆಳೆಯ ಗೆಳತಿಯೊಂದಿಗೆ ಹೊಕ್ಕು ಅಲ್ಲೇ ಮರದ ನೆರಳಲ್ಲಿ ಕೂತು ಕೊಂಚ ಜೊಂಪು ಹತ್ತಿಸಿಕೊಂಡು ಬಂದರಾಯಿತು. ಪರೀಕ್ಷೆ ಕಟ್ಟಿರುವವರು ಮನೆಯ ಒಂದು ಮೂಲೆಯಲ್ಲಿ ತೂಕಡಿಸಿ ಪರಿಹಾರ ಕಂಡುಕೊಳ್ಳಬಹುದು. ಯಾರಾದರೂ ಸಮಾಜಶಾಸ್ತ್ರಿಗಳು ಇದರ ಬಗ್ಗೆ – ಅಂದರೆ ನಿದ್ದೆ ಬಗ್ಗೆ ಅಲ್ಲ, ಬೆಂಗಳೂರಿನಲ್ಲಿ ಹಾಡುಹಗಲು ಕಳ್ಳತನಗಳು ನಡೆಯಲು ಕಾರಣ ಕುರಿತು– ಪಿಎಚ್ಡಿ ಮಾಡಲಿ ಎಂದು ನಾನು ಸೂಚಿಸಬಯಸುತ್ತೇನೆ.

ಬೆಂಗಳೂರಿನಲ್ಲಿ ಬೀಳುವ ಜೂನ್ ತಿಂಗಳಿನ ಮಳೆಯ ಬಗ್ಗೆಯೂ ನೀವು ಮೈನವಿರೇಳಿಸುವ ಅನುಭವಗಳನ್ನು ಕೇಳಬಹುದು. ಅದೂ ಅವರವರ ಮನಸ್ಸಿನ ಸುಖದುಃಖಗಳ ಡಿಗ್ರೀಗಳಂತೆ ವೇರಿಯಾಗುತ್ತಾ ಹೋಗುತ್ತದೆ. ಮಳೆ ಬಂದ ಮಾರನೆ ದಿವಸ ಕೆಲವರಿಗೆ ನಗರದ ಮರಗಿಡಗಳು ಥಳಥಳಿಸುತ್ತದೆ ಮತ್ತು ಹಸಿರು ಮುಚ್ಚಿ ಅಂದವಾಗಿರುತ್ತದೆ. ನಗರದ ತುಂಬಾ ಜೀವನೋತ್ಸಾಹ ತುಂಬಿತುಳುಕುತ್ತಾ ಬದುಕಿಗೆ ಒಂದು ಅರ್ಥವನ್ನು ನೀಡುವ ಯತ್ನದಲ್ಲಿರುತ್ತದೆ. ಅವರಿಗೆ ನಗರ ಆಗ ತಾನೇ ಸ್ನಾನ ಮುಗಿಸಿ ತಲೆಯ ಕೂದಲನ್ನು ಒಣಗಿಸಿಕೊಳ್ಳಲು ಮಹಡಿ ಏರಿರುವ ತರುಣಿಯ ಹಾಗೆ ಕಾಣಿಸುತ್ತದೆ. ಗೊರೂರು ರಾಮಸ್ವಾಮಿ ಐಯ್ಯಂಗಾರ್ಯರ ವಿನೋದ ಭಾವ ಇರುವವರಿಗೆ ಮತ್ತು ಕೆ.ಎಸ್. ನರಸಿಂಹಸ್ವಾಮಿಗಳ ಪ್ರೇಮ ಕಾವ್ಯ ಓದುವವರಿಗೆ ಅಥವಾ ಅನುಭವಿಸುತ್ತಿರುವವರಿಗೆ...

ಇನ್ನು ಸಿದ್ದಲಿಂಗಯ್ಯ ಅಥವಾ ಕುಂ.ವೀ. ಓದುಗರಿಗೆ ಮಳೆಬಂದ ಮಾರನೇ ದಿವಸ ಬೆಂಗಳೂರು ಇಡೀ ಪ್ರಪಂಚದಲ್ಲಿನ ಕೊಳಕನ್ನೆಲ್ಲಾ ಹೊತ್ತು ಸಾಗಿಸುವ ಕಸದ ಬಂಡಿಯಾಗಿ,ನರಕದ ಕೊಳಕನ್ನು ಸಾಗಿಸುವ ನಗರವಾಗಿ ಕಾಣಿಸಿಬಿಡುತ್ತದೆ. ಅವರವರ ಭಾವಕ್ಕೆ ತಕ್ಕ ಹಾಗೆ ನಗರ ಬಿಂಬಿತವಾಗುತ್ತದೆ.

ಇನ್ನೂ ತಮಾಷೆಯೆಂದರೆ ಮಳೆಗಾಲ ಬಂದಕೂಡಲೇ ಬೆಂಗಳೂರಿನ ತಾಪ ಎರಡೋ ಮೂರೋ ಡಿಗ್ರಿ ಕುಸಿಯುವುದು. ಮಳೆಗೂ ಛಳಿಗೂ ವ್ಯತ್ಯಾಸ ತಿಳಿಯದೆ ಜನ ಸ್ವೆಟರು ಶಾಲು ಹೊರತೆಗೆದು ಮಳೆಗಾಲದಲ್ಲಿ ಉಪಯೋಗಿಸುತ್ತಾರೆ! ತುಂಬಾ ಹಿಂದೆ ಜನ ರೈನ್ ಕೋಟು ತೊಟ್ಟು ಮಳೆಯಲ್ಲಿ ಓಡಾಡುವುದು ಕಾಣಿಸುತ್ತಿತ್ತು.ಈಗ ರೈನ್ ಕೋಟ್ಗು ತೊಟ್ಟಿರುವವರನ್ನು ಕಾಣುವದೂ ಅಪರೂಪ. ಆದರೆ ತರಹೇವಾರಿ ಚತ್ರಿಗಳು ನಿಮಗೆ ಕಾಣಸಿಗುತ್ತವೆ. ಮಳೆಗಾಲದ ನಂತರ ಬರುವ ಚಳಿಗಾಲದ ಬಗ್ಗೆ ನಮ್ಮೂರಿನವರ ಯೋಚನೆಗಳನ್ನು ಮತ್ತೊಮ್ಮೆ ತಮಗೆ ತಿಳಿಸುತ್ತೇನೆ.

✵

# ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಳಿ**

- ಶೋಭಾ ಕರಂದ್ಲಾಜೆ ಕರೆಂಟ್ ಮಂತ್ರಿ ಆಗಿರುವುದರಿಂದ ಅವರನ್ನು ಶೋಭಾ ಕರೆಂಟ್ಲಾಜೆ ಎಂದು ಕರೆಯಬಹುದಲ್ಲವೆ? ಎಂದೊಬ್ಬರು ಕೇಳುತ್ತಿದ್ದಾರೆ. ಏನೇ ಆದರೂ ಯಡ್ಯೂರಪ್ಪನವರನ್ನು ಒಂದು ಮಾತು ಕೇಳುವುದು ಒಳ್ಳೆಯದು.
- ಜನಾರ್ದನ ರೆಡ್ಡಿ ರನ್ನಿಂಗ್ ರೇಸ್‌ನಲ್ಲಿ ಭಾಗವಹಿಸಿದರೆ ರೆಫರಿಗೆ ಅವರಿಗೆ ಹೀಗೆ ಸ್ಟಾರ್ಟಿಂಗ್‌ನಲ್ಲಿ ಹೇಳಬಹುದು: *Reddy, Get asset, Go....*
- *To err is human, to admit it is newspaper.*
- ಆಶ್ವಾಸನೆ ಮೋಡದಂತೆ; ಅದನ್ನು ಈಡೇರಿಸುವುದೇ ಮಳೆ.
- ಮರ ಬೀಜದಲ್ಲಿ ಜೀವಿಸಿರುತ್ತದೆ.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- *The Monk who sold his Ferrari knew about the petrol price hike.*
- ನಮ್ಮಲ್ಲಿ ಕ್ಷಮಿಸುವ, ಮರೆಯುವ ಗುಣ ಇದ್ದರೂ ನಾವು ಕ್ಷಮಿಸಿದ ವ್ಯಕ್ತಿ ಅದನ್ನು ಮರೆಯಬಾರದು ಎಂದು ಬಯಸುತ್ತೇವೆ.
- ಪ್ರೀತಿಯ ಸಂಕೇತವಾಗಿ ಹೂವನ್ನು ಕೊಟ್ಟರೆ ಅದು ಕೆಲದಿನಗಳಷ್ಟೇ ತಾಜಾ ಆಗಿ ಉಳಿದೀತು. ಹೂ ಗಿಡವನ್ನೇ ಕೊಟ್ಟರೆ ಆ ಪ್ರೀತಿ ಶತಮಾನೋತ್ಸವ ಕಂಡೀತು.
- *I am not a human being*
  *I am a human becoming*
- ನೀವು ನೇರವಾಗಿಯೇ ನಡೆಯುತ್ತಿದ್ದರೆ ನಿಮಗೆ ವಾಪಸ್ ಬರಲು ಅಸಾಧ್ಯವಾಗಬಹುದು.
- ಸಾವಿರ ಮೈಲಿಯ ಪಯಣ ಆರಂಭವಾಗುವುದು ಇಡುವ ಮೊದಲ ಹೆಜ್ಜೆಯಿಂದ ಅಲ್ಲ, ಆ ಹೆಜ್ಜೆ ಇಡಬಲ್ಲೆ ಎಂಬ ಆತ್ಮವಿಶ್ವಾಸದಿಂದ.
- *Air India should be called national carried, not national carrier. It is being carried by the whole nation.*
- 'ನೀವು ಹೇಳುವುದು ಸರಿಯೆನಿಸುತ್ತದೆ' ಎಂದಾಗ 'ನಾನು ಹೇಳಿದ್ದು ತಪ್ಪು' ಎಂದು ವಿನಮ್ರವಾಗಿ ಒಪ್ಪಿಕೊಂಡಂತಾಗಲಿಲ್ಲವೆ?
- ಓಬಳಾಪುರಂ ಮೈನಿಂಗ್ ಕಂಪೆನಿಗೆ ಸಿಯಾಚೆನ್ ಪ್ರದೇಶವನ್ನು ಗುತ್ತಿಗೆಗೆ ಕೊಟ್ಟರೆ ಇಡೀ ಜಾಗವನ್ನು ಅಗೆದು ಹಾಕಿ ಸಿಯಾಚೆನ್ ಸಮಸ್ಯೆಯನ್ನು ಸುಲಭವಾಗಿ ಬಗೆಹರಿಸುತ್ತೇನೆ ಎಂದು ಜನಾರ್ದನ ರೆಡ್ಡಿ ಹೇಳಿಯಾರು.
- *Gandhi would have been a great bowler. He could spin as well as fast.*

# ಶ್ರದ್ಧಾಂಜಲಿ



## ಎ.ಎಸ್. ರಾಮಕೃಷ್ಣ (ರಾಮಿ)

ಕೊರವಂಜಿಯ ಕಾಲದಿಂದ ಪ್ರಾರಂಭವಾಗಿ ಅಪರಂಜಿಯವರೆವಿಗೂ ನಮ್ಮ ಬಳಗದೊಂದಿಗೆ ಬೆಸೆದುಕೊಂಡಿದ್ದ ಮತ್ತು ಇತ್ತೀಚಿನವರೆವಿಗೂ ಬರವಣಿಗೆಯಲ್ಲಿ ಉತ್ಸುಕರಾಗಿದ್ದು ಆಗಾಗ ಅಪರಂಜಿಗೆ ಲೇಖನಗಳನ್ನು ಕಳಿಸುತ್ತಿದ್ದ ಶ್ರೀ ಎ.ಎಸ್. ರಾಮಕೃಷ್ಣ (ರಾಮಿ) ಅವರು 23.6.2012ರಂದು ನಮ್ಮನ್ನಗಲಿದ್ದಾರೆಂದು ತಿಳಿಸಲು ಅಪರಂಜಿ ವಿಷಾದಿಸುತ್ತಾಳೆ. ಬಹಳ ವರ್ಷಗಳ ಕಾಲ ಮಣಿಪಾಲದಲ್ಲೇ ವಾಸವಿದ್ದ ರಾಮಿ ಅವರು ಇತ್ತೀಚೆಗೆ ಬೆಂಗಳೂರಿಗೆ ಸ್ಥಳಾಂತರಗೊಂಡಿದ್ದರು. 86 ವರ್ಷದ ರಾಮಿ ಅವರು ನಮ್ಮನ್ನಗಲಿರುವುದು ಕೊರವಂಜಿ ಅಪರಂಜಿಯ ಒಂದು ಕೊಂಡಿ ಕಳಚಿ ಬಿದ್ದಂತಾಗಿದೆ. ಅಪರಂಜಿಯ ಎಲ್ಲ ಓದುಗರ ಪರವಾಗಿ ರಾಮಿಯವರ ಆತ್ಮಕ್ಕೆ ಶಾಂತಿಸಿಗಲೆಂದು ಅಪರಂಜಿ ನಡುಬಾಗಿ ಹಾರೈಸುತ್ತಾಳೆ.

---



## ಕೆ.ವೈ. ಮೃತ್ಯುಂಜಯ

ಅನೇಕ ವರ್ಷಗಳಿಂದ ತುಮಕೂರಿನಲ್ಲಿ ಒಂದು ಹಾಸ್ಯಾಂದೋಲನವನ್ನೇ ಮಾಡಿ, ತಿಂಗಳಿಗೊಂದು ಹಾಸ್ಯ ಕಾರ್ಯಕ್ರಮ ಮಾಡುತ್ತಾ ನಾಡಿನ ಎಲ್ಲ ಹಿರಿ-ಕಿರಿಯ ಹಾಸ್ಯ ಬರಹಗಾರರನ್ನೂ ಕಲಾವಿದರನ್ನೂ ಆಮಂತ್ರಿಸಿ, ಕಾರ್ಯಕ್ರಮ ಏರ್ಪಡಿಸಿ, ಅವರುಗಳನ್ನು ಸನ್ಮಾನಿಸಿ, ಸದಾ ಹಸನ್ಮುಖರಾಗಿದ್ದ ಶ್ರೀ ಕೆ.ವೈ. ಮೃತ್ಯುಂಜಯ ಅವರು ದಿನಾಂಕ 24.6.2012ರಂದು ನಸುಕಿನಲ್ಲಿ ಬೆಂಗಳೂರಿನ ಜಯದೇವ ಆಸ್ಪತ್ರೆಯಲ್ಲಿ ವಿಧಿವಶರಾದರು. ಇತ್ತೀಚೆಗೆ ಹಾಸ್ಯಲೋಕ ಎನ್ನುವ ಮಾಸಪತ್ರಿಕೆಯನ್ನು ಪ್ರಾರಂಭಿಸಿ, ಸದಭಿರುಚಿಯ ಹಾಸ್ಯ ಪ್ರಸರಣಕ್ಕೆ ಕೈಂಕರ್ಯ ತೊಟ್ಟಿದ್ದರು. ಮೃತರ ಆತ್ಮಕ್ಕೆ ಶಾಂತಿ ಸಿಗಲೆಂದು ಅಪರಂಜಿಯ ಓದುಗರ ಪರವಾಗಿ ಹಾರೈಕೆ.




Since 1998
**Whisper Hearing Aids**
Pvt. Ltd.
1030/13, 25 main, 39 cross,
4th 'T' block, Jayanagara, Bengaluru

SIEMENS
Authorised Hearing Care Centre

Avail **FREE** supply of batteries for a year
on purchase of hearing aids for this week.
10am - 1:30pm, 5pm - 8pm
Appointment : 26640571, 9741765454

**ಕಿವಿ - ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.**

**ಡಾ|| ಜಿ. ಪುರುಷೋತ್ತಮ ಇಡಿ.ಡಿ.**
**ವಾಕ್ - ಶ್ರವಣದೋಷ ತಜ್ಞ, ವಿಸ್ಪರ್ ವಾಕ್ - ಶ್ರವಣ ಕೇಂದ್ರ**

# ಮಧುಬಿಂದುಗಳು

ಸಂಪಾದನೆ : ಹಾಸ್ಯಬ್ರಹ್ಮ ಟ್ರಸ್ಟ್, ಪ್ರಕಾಶಕರು : ಹೇಮಂತ ಸಾಹಿತ್ಯ
ರಾಜಾಜಿನಗರ, ಬೆಂಗಳೂರು - 560 010, ಪುಟಗಳು : 232, ಬೆಲೆ : ರೂ. 120/-

**- ಗೋಪಾಲಿ**

ಲಲಿತ ಸಾಹಿತ್ಯದ ಒಂದು ಪ್ರಮುಖ ಭಾಗವಾದ ಪ್ರಬಂಧಗಳು ಈಚೆಗೆ ಕ್ಷೀಣವಾಗುತ್ತಿದ್ದು ಅದನ್ನು ಶಾಸ್ತ್ರೀಯವಾಗಿ ಅಭ್ಯಾಸ ಮಾಡಿ ರಚಿಸಲು ಪ್ರೇರೇಪಣೆ ನೀಡುವ ಒಂದು ಕಮ್ಮಟವನ್ನು ಹಾಸ್ಯಬ್ರಹ್ಮ ಟ್ರಸ್ಟ್ ಈಚೆಗೆ ನಡೆಸಿತು. ಕಮ್ಮಟದಲ್ಲಿ ಪ್ರಬಂಧ ಸಾಹಿತ್ಯ ಕುರಿತ ಹಾಗೆ ಸಮಗ್ರ ವಿಚಾರಗಳನ್ನು ಪ್ರೊ. ಅ.ರಾ. ಮಿತ್ರ, ಪ್ರೊ. ರಾಮಸ್ವಾಮಿ, ಡಾ. ಚಿಂತಾಮಣಿ ಕೊಡ್ಲೆಕೆರೆ ಹಾಗೂ ಶ್ರೀ ಈಶ್ವರ ಚಂದ್ರ ಅವರುಗಳು ಮಂಡಿಸಿದ್ದರು ಮತ್ತು ಪ್ರಬಂಧ ರಚನೆಯೂ ನಡೆದಿತ್ತು. ಹೀಗೆ ರಚಿತವಾದ ಪ್ರಬಂಧಗಳನ್ನು ಪರಿಷ್ಕರಿಸಿ ಈ ಸಂಕಲನವನ್ನು ಹೊರತರಲಾಗಿದೆ.

ಕಾಲೇಜು ಶಿಕ್ಷಕರು, ಕಾರ್ಖಾನೆ ನೌಕರರು, ಬ್ಯಾಂಕಿನ ಅಧಿಕಾರಿಗಳು.. ಹೀಗೆ ಸಮಾಜದ ವಿವಿಧ ಸ್ತರಗಳಲ್ಲಿನ ವೈವಿಧ್ಯಮಯ ಬದುಕಿನಲ್ಲಿ ತೊಡಗಿರುವ ಆದರೆ ಸಮಾನ ಮನಸ್ಕರಾಗಿ ಸಾಹಿತ್ಯವನ್ನು ತಮ್ಮ ಹಾಬಿಯನ್ನಾಗಿಸಿಕೊಂಡಿರುವ ಆಸಕ್ತರು ಇಲ್ಲಿನ ಪ್ರಬಂಧಗಳನ್ನು ರಚಿಸಿದ್ದಾರೆ. ಪ್ರತಿ ಲೇಖನ ಓದಬೇಕಾದರೂ ಎದ್ದು ಕಾಣಿಸುವ ಒಂದು ಸಮಾನ ಅಂಶವೆಂದರೆ ಲೇಖನದ ಹಿಂದಿರುವ ಚಿಂತನೆ ಮತ್ತು ಆಳವಾದ ಅಭ್ಯಾಸ. ತಮ್ಮ ಬದುಕಿನ ಪ್ರಸಂಗಗಳನ್ನು ಅಕ್ಷರದಲ್ಲಿ ಸೆರೆಹಿಡಿದಿರುವ ಅಪೂರ್ವವಾದ ಕೌಶಲ್ಯ ಮತ್ತು ಅಪ್ಯಾಯಮಾನವಾಗಿ ಓದಿಸಿಕೊಂಡು ಹೋಗುವ ಗುಣವಲ್ಲದೇ ಬರಹಗಳಲ್ಲಿ ತುಂಬಿ ತುಳುಕಾಡುವ ಲವಲವಿಕೆ. ಲಲಿತ ಪ್ರಬಂಧಗಳ ಜೀವಾಳವೇ ಇದು ಎನಿಸುವ ಮಟ್ಟಿಗೆ ಈ ಗುಣಗಳು ಲೇಖನಗಳಲ್ಲಿ ಹಾಸುಹೊಕ್ಕಾಗಿವೆ.

ಡಾ. ಎಸ್. ರಾಮಸ್ವಾಮಿಯವರು ಸಮಗ್ರ ಲಲಿತ ಪ್ರಬಂಧದ ಇತಿಹಾಸವನ್ನು ಪರಿಚಯಿಸಿ ಇಂಗ್ಲಿಷ್‌ನಲ್ಲಿ ಈ ಸಾಹಿತ್ಯ ಪ್ರಾಕಾರದ ಹುಟ್ಟು, ಬೆಳವಣಿಗೆ, ಆಶಯ, ಸಾಧನೆಗಳನ್ನು ಪ್ರಸ್ತಾಪಿಸುವುದರ ಸಂಗಡ ತಮ್ಮ ''ಅಲೆಮಾರಿಯ ಲಕ್ಷಣಗಳು'' ಪ್ರಬಂಧವನ್ನೂ ಸಂಕಲನದಲ್ಲಿ ಸೇರಿಸಲು ನೆರವಾಗಿದ್ದಾರೆ. ಡಾ. ಚಿಂತಾಮಣಿ ಕೊಡ್ಲೆಕೆರೆ ''ನನ್ನದೃಷ್ಟಿಯಲ್ಲಿ ಅತ್ಯುತ್ತಮ ಲಲಿತ ಪ್ರಬಂಧ'' ಹಾಗೂ ''ಪುರುಷನ ಮುಂದೆ ಸ್ತ್ರೀ ಎಂಬ ಮಾಯೆ'' ಲೇಖನ ನೀಡಿದ್ದಾರೆ. ಒಟ್ಟಾರೆಯಾಗಿ 27 ಲಲಿತ ಪ್ರಬಂಧಗಳು ಸಂಕಲನದಲ್ಲಿದ್ದು ನಾಡಿನ ಪ್ರಬುದ್ಧರು ತಮ್ಮ ಚಿಂತನೆಗಳನ್ನು ಹಲವಾರು ಹೊಸಹಾದಿಯಲ್ಲಿ ಹರಿಯಬಿಟ್ಟಿರುವುದು ಇಲ್ಲಿನ ವಿಶೇಷ.

ಸಂಕಲನಕ್ಕೆ ಮಧುಬಿಂದುಗಳು ಎಂದು ನಾಮಕರಣ ಮಾಡುವುದರೊಂದಿಗೆ ಸೂಕ್ತ ನಿರ್ದೇಶನವನ್ನೂ ಪ್ರೊ. ಮಿತ್ರಾ ಅವರು ನೀಡಿದ್ದು ಪೂರಕ ಲೇಖನವನ್ನೂ ಬರೆದಿದ್ದಾರೆ. ಹೊಸಬರನ್ನು ತನ್ನ ತೆಕ್ಕೆಗೆ ಸೇರಿಸಿಕೊಂಡು ಬೆಳೆಯಬೇಕು. ಮತ್ತೆ ಲಲಿತ ಪ್ರಬಂಧಗಳಿಗೆ ಪುನರ್ವಸತಿ ಕಲ್ಪಿಸಬೇಕು, ಹೊಸಬರು ಹಳಬರೊಂದಿಗೆ ಸೇರಿ ಪ್ರಬಂಧದ ತೇರನ್ನು ಎಳೆಯಬೇಕು ಎಂಬುದೇ ನಮ್ಮ ಆಶಯ ಎಂದು ಅವರು ಮುನ್ನುಡಿಯಲ್ಲಿ ಹೇಳಿರುವ ಮಾತುಗಳು ಇಲ್ಲಿ ತನ್ನ ರೂಪವನ್ನು ಪಡೆದಿದೆ. ಒಟ್ಟಾರೆಯಾಗಿ ಹೇಳಬೇಕೆಂದರೆ ಮುಂದಿನ ದಿನಗಳಲ್ಲಿ ಲಲಿತ ಪ್ರಬಂಧಗಳನ್ನು ಕುರಿತು ಯಾರೇ ಯೋಚಿಸುವಾಗಲೂ ತಟ್ಟನೆ ಕಣ್ಣೆದುರು ಈ ಸಂಕಲನ ಬರುತ್ತದೆ. ಸಂಗ್ರಹಯೋಗ್ಯವಾದ ಕೃತಿ ಎಂದು ಸರ್ಟಿಫಿಕೇಟು ನೀಡಲೇ ಬೇಕಾದ ಕೃತಿಯಿದು.

✲




# ನೆನೆಯುತ್ತ ನೆನೆಸುತ್ತ...!

**- ಭೂಮಿತಾಯಿ**

*'ಮಳಿಬಂತೋ ಮಾರಾಯಾ...*

*ಗುಡಿಕಟ್ಟೋ ಸಿದ್ದೆಶಾ..'*

**ಬಿ**ರು ಬಿಸಿಲಿನ ಮಧ್ಯಾಹ್ನದೊಳಗ ಹುಡುಗ್ರು, ಮಾವಿನಕಾಯಿ ತುಡುಗರು ಜೋರೆ ಚೀರಿ ಹಾಡಿದ್ರಂದ್ರ ಮುಂಗಾರು ಮೋಡ ಕಟ್ಟಂಗ ಖರೆ. ಗುಡುಗಿಗಿಂತ ಜೋರೆಗೆ ಗುಡುಗುವ ಹುಡಗ್ರ ಹಿಂಡು ಕಂಡ್ರ ಸಾಕು, ಇನ್ನ ಹನಿ ಉದರ್ತಾವ ಅಂತನೇ ಅರ್ಥ.

ಧಾರವಾಡದ ಮಳೀನೆ ಹಂಗ, ಕೊಡಿ ಮಡಚೂ ಹಂಗಿಲ್ಲ. ಒಮ್ಮೆ ಬಿಚ್ಚಿದ್ರ ಸಾಕು... ಧೋ... ಅಂತ ಹಟಮಾರಿ ಕೂಸು ಅತ್ತಂಗ. ಸಂಜೀ ನಾಲ್ಕರ ಸುಮಾರ ಬಂತಂದ್ರ 'ತಂಗಿ, ಮ್ಯಾಳಗಿಗೆ ತೂತ ಬೀಳ್ತದೇನ... ಹೆಂತಾ ಮಳಿ ಇದು' ಅಂತ ಅಜ್ಜ ಕೇಳ್ತಿದ್ರು.

ಧಾರವಾಡ ಕಡೆ, ಅಜ್ಜಿಗೆ ಅಮ್ಮ ಅಂತಾರ. ಅಮ್ಮನಿಗೆ ಅವ್ವ ಅಂತಾರ. ಅಮ್ಮನ ಧ್ಯಾನ ಒಂದೇ ಕಡೆಗೆ. ಬಟ್ಟೀ ಒಣಗಸಬೇಕು. ಬ್ಯಾಸಗಿ ಮಳಿ ಹಂಗೆ ಬಂದು ಒಂದು ನಾಲ್ಕು ಹನಿ ಉದುರಿಸಿ ಹೋಗೂದು. ಮಳಿ ಬಂತು ಅಂತ ಹಗ್ಗದಿಂದ ಬಟ್ಟಿ ತಗಿಯೋದ್ರೊಳಗ, ಸೂರ್ಯ ಮೋಡದಿಂದ ಹೊರಗ ಇಣಕಿ 'ಔವಕ್ಲೆ' ಅಂತಿದ್ದ, ಅಮ್ಮ ಒಂದೇ ಉಸರನಾಗ ಬೈತಿದ್ಲು. 'ಸುಡ್ಲಿ ಮಳಿ' ಬಂದರೆ ಬರಾಂಗಿಲ್ಲ, ನಿಂತರೆ ನಿಂದ್ರಾಂಗಿಲ್ಲ.. ನಾವೆಲ್ಲ ಮಾವಿನಕಾಯಿ ಗುಳಂಬ ಎಡಕಿನ ಅಂಗೈಯ್ಯಾಗ ಹಾಕ್ಕೊಂಡು, ಬಲಕಿನ ತೋರುಬೆರಳ್ಳೆ ಚೀಪ್ಕೊಂತ ಕೇಳ್ತಿದ್ವಿ, 'ಮಳೀನು ಸುಡ್ತಾರ..?' ಹೆಂಗ?...

ಒಂದು ಹೆಗಲ ಮ್ಯಾಲೆ ರಾಶಿ ಬಟ್ಟಿ ಹೇರಿಕೊಂಡ ಅಮ್ಮ ನಮಗ ಬೈಕೊಂತ ಜಗಲಿ ಕಟ್ಟಿ ಹತ್ತತ್ತಿದ್ದಳು. 'ಇದೇನ ತಾಯಿ, ದೇವ್ರಿಗೆ ಕೆಮ್ಮಾಗೇದನ? ಗುಡಗ್ತಾನ, ಈಟ ಈಟು, ಉಗುಳಿದ್ಹಂಗ ಮಳಿ ಸುರಸ್ತಾನ, ತೊಯ್ಯಾಂಗಿಲ್ಲ, ತೇಲಾಂಗಿಲ್ಲ' ಅಂತ ಶಾಪ ಹಾಕ್ತಿದ್ದಳು.

ಅಯ್ಯಯ್ಯ ಶಿವ ಶೆಟಗೊಂಡಾನಂತ ಕಾಣ್ತದ. ಗಂಗಿ ಗೌರಿ ಕೂಡೆ ಕಣ್ಣೀರ ಹಾಕ್ಯಾರ ನೋಡು, ಮುಸುಮುಸು ಅಂತ ಮಳಿ. ಒಮ್ಮೆ ಬಂದ ಗಪ್ಪಾ ತಂದ್ರ, ಮತ್ತ ಹಂಗೇ ಬರ್ತದ. ಹೆಣ್ಮಕ್ಕಳು ಅತ್ತಂಗದ ಅಂತಿದ್ರು ಆಶಾಢದ ಮಳಿಗೆ. ಆಗಾಗ ಬಂದು ಹೋಗುವ ಮಳಿ ಅದು. ನಿಂತದ ಅನ್ನಂಗಿಲ್ಲ, ಮಳಿ ಬರಾಕತ್ತದ ಅನ್ನೊ ಹಂಗೂ ಇಲ್ಲ.

ಶಿವ ಶೆಟಗೊಳ್ಳಿ ಬಿಡ್ಲಿ, ಗಂಗಿ ಗೌರಿ ಕಣ್ಣೀರು ಹಾಕೂದಂತೂ ನಿಲ್ಲೂದಿಲ್ಲ. ಧಾರವಾಡದ ಮಳಿ ಮತ್ತು ಬೆಳಗಾವಿ ಹುಡುಗಿ ಎರಡೂ ನಂಬಬಾರ್ದು ಅನ್ನೂದೊಂದು ಮಾತು ಹೇಳ್ತಿದ್ರು. ಎರಡೂ ಯವಾಗ ಬರ್ತಾವ, ಯವಾಗ ಕೈ ಕೊಡ್ತಾವ ಹೇಳಾಕ ಆಗೂದಿಲ್ಲಂತ. ಧಾರವಾಡ ಮಳೀ ಬಗ್ಗೆ ಹಿಂಗಂತ ಖಾತ್ರಿ ಹೇಳಬಹುದು. ಆದ್ರ ಬೆಳಗಾವಿ ಹುಡುಗ್ಯಾರ ಬಗ್ಗೆ ಮಾತಾಡೂದು ತಪ್ಪಾಗ್ತದ ನೋಡ್ರಿ.

ಶ್ರಾವಣದ ಮಳಿ ಶುರು ಆತಂದ್ರ, ಆಕಾಶಕ್ಕ ಜರಡಿಗತೆ ತೂತ ಬಿದ್ದದ ನೋಡು, ಒಂದೇ ಸಮ ರಾತ್ರಿಯಿಂದ ಸುರೀತದ ಮಳಿ. ಮಳೀ ಬರುವ ರಭಸ, ಅದರ ಗುಣ ಎಲ್ಲಾದಕ್ಕೂ ಒಂದೊಂದು ಉಪಮೇಯಗಳಿರ್ತಿದ್ದವು. ಈಗ ಅವನ್ನ ಹೋಲಸಾಕ ಸಾಧ್ಯನ ಇಲ್ಲ.

ಹೊರಗ ಮಳೀ ಸುರೀತಿದ್ರ ಅಂಗಳದಾಗ ಸಣ್ಣುಂಗರ ಹುಟ್ತಿದ್ವು. ಅವನ್ನ ನೋಡ್ಕೋಂತ, ಒಂದೊಂದು ನೀರಿನ ಗುಳ್ಳಿಗೂ ಒಬ್ಬೊಬ್ಬರ ಹೆಸರು. 'ಆ ಡುಮ್ಮನ ಗುಳ್ಳಿ, ನೋಡು, ಅಮ್ಮನ್ಹಂಗ ಐತಿ... ದಂಡೀತನ ಹೋಗೂದ ಇಲ್ಲ, ಇಲ್ಲೆ ನಡಕ ಒಡೀತೈತಿ... ಆ ಚಿಟಮ್ಯಾ ಗುಳ್ಳಿ ನಾನು. ನೋಡಲ್ಲಿ, ಏನ ಬಂದ್ರೂ ಹೆಂಗ ಪಾರಾಗ್ತೀನಿ..' ಅಜ್ಜನೊಂದಿಗೆ ನಮ್ಮ ಮಾತುಗಳು ಹಿಂಗೇ ಮುಂದುವರೀತಿದ್ವು.

> **'ದೇವ್ರಿಗೆ ಕೆಮ್ಮಾಗೇದನ?**
> **ಗುಡಗ್ತಾನ, ಈಟ ಈಟು,**
> **ಉಗುಳಿದ್ಹಂಗ ಮಳಿ ಸುರಸ್ತಾನ,**
> **ತೊಯ್ಯ್ಯಾಂಗಿಲ್ಲ, ತೇಲಾಂಗಿಲ್ಲ'**

ಅಡಗಿ ಮನ್ಯಾಗ ಮಾತ್ರ ಸೇಂಗಾ ಒಗ್ಗರಣಿಯೊಳಗ ಬಳ್ಳೊಳ್ಳಿ ಘಂ ಅನ್ನೂಹಂಗ ಸಿಡೀತಿದ್ವು. ಈ ವಾಸನಿಗೆ ಮೂಗು ಅರಳಿಸಿಕೊಂಡು ಅಡಗಿಮನಿಗೆ ಓಡತಿದ್ವಿ. ಸೇಂಗಾ ತಾಮ್ರದ್ಹಂಗ ಹೊಳದ್ರ, ಪುಠಾಣಿ ಬಂಗಾರದ ಬಣ್ಣಾ ತಾಳ್ತಿದ್ದವು. ಕರಿಬೇವು ಗರಿಮುರಿ ಅನ್ನು ಮುಂದ ಚುರಮುರಿ ಕಲಿಸಿ ಚೂಡಾ ಮಾಡ್ತಿದ್ರು. ಅಮ್ಮ ಚೂಡಾ ಮಾಡಿದ್ರ, ಮಾಮಿ ಯಾಕ ಅಳ್ತಾಳು ಅಂತನ ತಿಳೀತಿರ್ಲಿಲ್ಲ. ಮಾಮಿ ಅಡಗಿ ಮನ್ಯಾಗ ಉಳ್ಳಾಗಡ್ಡಿ ಸಣ್ಣಗೆ ಹೆಚ್ಚಿ, ಅದನ್ನ ಕೊಚ್ಚಿ, ನೀರಾಗ ತೊಳದು, ತರ್ತಿದ್ರು. ಅದಕ್ಕಿಂತ ಮಾಮಿಯ ಕೆಂಪಾದ ಮೂಗು, ಕಣ್ಣೊರೆಸಿಕೊಂಡು ಬರೂದೆ ಗಾಬ್ರಿ ಹುಟ್ಟಸ್ತಿತ್ತು. ಆದ್ರ ಆ ಕಣ್ಣೀರಿಗಿಂತ ಹೆಚ್ಚಾಗಿ ಕಾಡುತ್ತಿದ್ದುದು ಪೇಪರ್ ಹರೀಬೇಕು. ಬಣ್ಣದ ಪೇಪರ್‌ನ ಎರಡು ಬಟ್ನಾಗ ಹಿಂಗ ಸುತ್ತಿ ಅಜ್ಜ ಮಡಕಿ ಮಾಡಿ, ಅದರ ಪೊಟ್ಣ ಕಟ್ತಿದ್ದ. ಅದಕ್ಕ ಪೇಪರ್ ಪುಡಕಿ ಅಂತಿದ್ವಿ. ಅದರೊಳಗ ಚುರುಮುರಿ ಹಾಕ್ಕೊಂಡು, ಕಟ್ಟಿ ಮ್ಯಾಗ ಕುತ್ಗೊಂಡು ಚೂಡಾ ಬಾಯಾಡಸ್ಕೋಂತ ಚಹಾ ಕುಡೀತಿದ್ವಿ. ಮಳಿ ಅಂದ್ರ ಅದಕ್ಕೆ ಸೇರ್ತಿತ್ತು. ಮಳಿ ಬಂದ್ರ, ಹಾಲು ಕೊಡ್ತಿರ್ಲಿಲ್ಲ. ಚಹಾ ಕೊಡ್ತಿದ್ರು. ವಾವ್ವಾರೆ ಮಳಿಯ ಅಂತ ಬಣ್ಣಿಸ್ಕೊಂತ ಚಾ ಹೀರಕೊಂತ ಕೂಡತಿದ್ವಿ.

ಇಷ್ಟು ಇಷ್ಟ ಆಗೂ ಮಳಿ ಮ್ಯಾಲೂ ಒಮ್ಮೊಮ್ಮೆ ಸಿಟ್ಟು ಬರ್ತಿತ್ತು. ಜೂನ್ 7ಕ್ಕ ಮೃಗಶಿರ ನಕ್ಷತ್ರ. ಮಿರ್ಗಾ ಅಂತಾರ. ಮಿರ್ಗಾ ಕುಂತ ಮ್ಯಾಲೆ ಮಾವಿನ ಹಣ್ಣು ತಿನ್ನಬಾರದು ಅನ್ನೂದೊಂದು ಕರಾರು. ಮನಿ ಗಿಡದಾಗ ಕಾಯಿ, ಹಿತ್ತಲ ಕೋಣ್ಯಾಗ ಹಣ್ಣ ಮಾಡಾಕ ಒಟ್ಟಿದ ರಾಶಿಯಿಂದ ಒಂದ ಒಂದು ಹಣ್ಣು ತೊಗೊಳ್ಳುಹಂಗ ಇರಲಿಲ್ಲ. ಯಾಕಂದ್ರ ಮಿರ್ಗಾ

ಕುಂತದ ಅನ್ನೋರು. ಇದ್ಯಾಕ ಮಿರ್ಗಾ ಕುಂದರ್ತದ? ಎದ್ದ ಹೋಗಾಕ ಏನು ತೊಗೊತದ ಅನ್ನೊಹಂಗ ಆಗ್ತಿತ್ತು.

ಮೃಗಶಿರ ಮಳಿ ಬಂದ ಮ್ಯಾಲೆ ಮಾವಿನ ಹಣ್ಣಿನಾಗ ಹುಳಾ ಬರ್ತಾವು. ಹಣ್ಣು ಚೀಪಿ ತಿನ್ನೋರಿಗೆ ಗೊತ್ತಾಗುದಿಲ್ಲ ಅಂತ ಹಣ್ಣು ತಿನ್ನೂದು ಬ್ಯಾಡ ಅಂತಿದ್ರು. ಈಗಿನ್ಹಂಗ ಹೋಳಿ ತಿನ್ನೂದಾದ್ರ ಮಿರ್ಗಾ ಏನು ಕೂಡ್ತಿರ್ಲಿಲ್ಲ ಏನೊ?

ಧಾರವಾಡದ ಆಟೋ ಸುದ್ದಿ ಹೇಳ್ಲಿಕ್ಕ ಮಳೀ ಬಿಡೂದೇ ಇಲ್ಲ. ಆಟೋಕ್ಕ ಎರಡೂ ಕಡೆನು ಸಿಮೆಂಟ್ ಚೀಲ, ಹರದ ಬ್ಲ್ಯಾಕ್‌ಬೋರ್ಡ್ ಕಟ್ಟೋರು. ಮಳಿ ಶುರು ಆತಂದ್ರ, 'ಅಕ್ಕಾರ, ದಾರಾ ಎಳೀರಿ, ಅಕ್ಕಾರ ದಾರ ಎಳೀರಿ' ಅನ್ನೋರು. ಆಟೋದಾಗ ಕುಂತೋರು, ತಮ್ಮ ಬಾಜೂಕ ಇಳಿಬಿದ್ದ ದಾರ ಎಳದು ಅದನ್ನ ಡ್ರೈವರ್ ಕಡೆ ಕಟ್ಟಿದ್ರ, ತಮ್ಮ ಕಡೆ ಕೈಯ್ಯಾಗ ಹಿಡ್ಕೊಂಡು ಕೂರತಿದ್ರು. ಗಾಳಿ ಬಂದ್ರ ಅವು ಪುಗ್ಗಾ ಉಬ್ಬಿದ್ಹಂಗ ಉಬ್ಬೂವು. ಬಹುಶಃ ಅಂಥಾ ಆಟೊ ನೋಡಿನ, ನ್ಯಾನೊ ಕಲ್ಪನೆ ಮೂಡಿರಲಿಕ್ಕೇಬೇಕು. ಈ ವಿಷಯದಾಗ ಟಾಟಾ ಕಂಪೆನಿ ವಿನ್ಯಾಸದ ಕ್ರೆಡಿಟ್ಟು, ಧಾರವಾಡದ ಆಟೋದೊರಿಗೆ ಕೊಡಬೇಕು.

ಕೊಡಬೇಕು, ಅಂದಕೂಡ್ಲೆ ನೆನಪಾಗುವುದು ಕೊಡಿ ಕೊಡಬೇಕು. ಎಲ್ಲಾರ ಮನ್ಯಾಗೂ ದೊಡ್ಡ ಹಿಡಕಿ ಕೊಡಿ ಒಂದು ಇರಾಕಬೇಕಿತ್ತು. ಅದೂ ಅಡಗಿ ಮನ್ಯಾಗ ಈಳಗಿ, ಕಸಬರಗಿ ಇದ್ಹಂಗ, ಮನಿ ಬಾಗಿಲಿಗೆ ಒಂದು ಕೊಡಿ ನೇತಹಾಕಿದ್ರ, ಮನಿ ಯಜಮಾನ್ರು ಮನ್ಯಾಗ ಅದಾರ ಅಂತನೇ ಅರ್ಥ. ಕೊಡಿ ಇರ್ಲಾರ್ದೆ ಯಾರೂ ಅಡ್ಡಾಡತಾನೇ ಇರ್ಲಿಲ್ಲ. ಆದ್ರೂ ಮಳಿಗಾಲದಾಗ ಯಾರರೆ ಕೊಡಿ ಬಿಟ್ಟ ಬಂದ್ರ, ಮನಿಯೋರಿಗೆ ಫಜೀತಿ. ಕೊಡಂಗಿಲ್ಲ, ಬಿಡೂಹಂಗೂ ಇಲ್ಲ. ಕೊಡ್ಲಿಕ್ಕ ಬಂದೋರ ಜೊತಿ ಇನ್ನಷ್ಟ ಮಾತಾಡಬೇಕು. ಮಳಿ ನಿಂದ್ರೂ ತನಾನೂ ಮಾತು ಮುಗಿಸಬಾರದು. ಕೊಟ್ರ, ಕೊಡಿ ವಾಪಸ್ ಬರೂ ಖಾತ್ರಿ ಇರೂದಿಲ್ಲ. ಅದಕ್ಕೆ ಅಜ್ಜ, ಒಂದು ಉಪಾಯ ಮಾಡಿದ್ರು. ತೀರ ಬೇಕಾದೋರು ಮನಿಗಿ ಬಂದಾಗ ಕೊಡಿ ಕೊಡಬೇಕಾದ ಪ್ರಸಂಗ ಬಂದ್ರ, 'ಒಳಗಿಂದ ಕೊಡಿ ಕೊಡ್ರೆವಾ' ಅನ್ನೋರು. ಆಗ ಕೊಡಿ ಹಿಡ್ಕೊಂಡು ಓಡಬೇಕಿತ್ತು. ಬಂದೋರು ಮತ್ತ ಮತ್ತ ಸಿಗುವು ಖಾತ್ರಿ ಇರ್ಲಿಲ್ಲ ಅಂದ್ರ, 'ಒಳಗ ಕೊಡಿ ಐತೇನ್ರವಾ?' ಅನ್ನೋರು. ಆಗ ಸೂಕ್ಷ್ಮ ತಿಳ್ಕೊಂಡವ್ರು, ಇಲ್ರಿ, ಅವರು ಒಯ್ದಾರು, ಇವ್ರು ಒಯ್ದಾರು ಅಂತ ಹೇಳಬೇಕಾಗ್ತಿತ್ತು.

ಈಗ ಕೊಡಿ ಹಿಡಿಯೂದ ಕಡಿಮಿ ಆಗ್ಯೆತಿ. ಹಂಗ ಮಳೀನೂ ಕಡಿಮಿ ಆಗ್ಯೆತಿ. ಧಾರವಾಡದ ಸೆಳೆತ ಮಾತ್ರ ಹಂಗ ಐತಿ.

ಈಗ ಮ್ಯಾಳಗಿ ತೂತಾಗುವಷ್ಟು ಮಳಿ ಬರೂದೆ ಇಲ್ಲ. ಯಾಕಂದ್ರ ನಮ್ಮನಿ ಮ್ಯಾಗ ಮನಿ, ಮನಿ ಮ್ಯಾಗ ಮನಿ ಅನ್ನೂ ಹಂಗ ಅಪಾರ್ಟ್‌ಮೆಂಟ್‌ನಾಗ ಕುಂತ ಮಳಿ ನೋಡ್ತೀವಿ. ಹಂಗ, ಅಜ್ಜನೂ ಇಲ್ಲ, ಮಳೀನೆ ಸುಡುವ ಅಮ್ಮನೂ ಇಲ್ಲ, ನಾವು ಕಂಡ ಮಳಿ, ನಮ್ಮ ಮಕ್ಳೂ ಕಾಣ್ಲಿ ಅಂತ ಬಯಸ್ತೀವಿ. ಆದ್ರ ನಮ್ಹಂಗ ಬರೀ ಕಾಲ್ನಾಗ, ಮಳಿ ನೀರಾಗ ದೋಣಿ ಬಿಡಾಕ ಇವರಿಗೆ ಇನ್‌ಫೆಕ್ಷನ್ ಆಗ್ಯೆತಿ ಅನ್ನೂ ಆತಂಕ. ಒಡಿಯುವ ಗುಳ್ಳಿ ತೋರಿಸೂನು ಅಂದ್ರ ಅಂಗಳಾ ಇಲ್ಲ, ಮಳಿ ನಿಂತ ಮ್ಯಾಲೆ ಮರ ಅಳಗ್ಯಾಡಿಸಿ, ಸುಳ್ಳ ಮಳಿ ಮಾಡಿ ನೆನೆಯೂದು ಗೊತ್ತೇ ಇಲ್ಲ. ನೆನದೋರೆಲ್ಲ... ನೆನಸ್ಕೊಂತ ಇರ್ತೀವಿ ಆ ಮಳೀಗೆ... ✵




# ಮಳೆಗಾಲ ಬಂದಾಗ ಎಷ್ಟು ಮಳೆಯೆಂಬರು...!

**- ಭುವನೇಶ್ವರಿ ಹೆಗಡೆ**

**ಕ**ರಾವಳಿ ಪ್ರದೇಶದಲ್ಲಿ ಹೊರಗೆ ಮಳೆ ಸುರಿವಾಗಲೂ ಒಳಗೆ ಬೆವರು ಸುರಿಯುತ್ತಿರುತ್ತದಂತೆ. 'ಇಲ್ಲೇ ಎಲ್ಲಾದ್ರು ಮಲೆನಾಡಿನ ಕಾಲೇಜಿನಲ್ಲಿ ಕೆಲಸ ಮಾಡ್ಬಾರ್ದೇನೇ...' ಎಂದು ನನ್ನ ಹಳ್ಳಿಯ ಕಷಾಯಪ್ರಿಯರ ಹಿತವಚನ ಕೇಳದೆಯೇ ಮಂಗಳೂರಿಗೆ ಬಂದು ಕೆಲಸಕ್ಕೆ ಸೇರಿದ್ದೆ.

ಜೂನ್ ತಿಂಗಳು ಬಂದು, ಕಾಲೇಜು ಪ್ರಾರಂಭವಾಗಿ ತರಗತಿಗಳು ತೆರೆದಿದ್ದೇ ಮುಂಗಾರು ಮೊದಲಿಟ್ಟಾಗ. ನಾವು ವಿದ್ಯಾರ್ಥಿಗಳಿಗೆ ಸಿಲಬಸ್ ಬರೆಸಿದ್ದೇ ಧೋ.. ಎಂಬ ಮಳೆಯ ಹಿಮ್ಮೇಳದಲ್ಲಿ. ಮೋಡ ಕವಿದ ನಸುಗತ್ತಲಿನ ಕ್ಲಾಸುಗಳ ಬೆಚ್ಚನೆಯ ವಾತಾವರಣ.

ಬಸ್ಸಿನಲ್ಲಿ ತೊಯ್ದು ತೊಪ್ಪೆಯಾದ ಹೆಣ್ಗಂಡುಗಳು ರಾಕ್ಷಸ ವಾಹನಗಳು ರಾಚಿ ಹೋದ ರಸ್ತೆ ನೀರನ್ನು ಅಭಿಷೇಕ ಮಾಡಿಕೊಂಡ ಪಾದಾಚಾರಿಗಳು ಯಾರನ್ನೇ ನೋಡಿ ಒದ್ದೊದ್ದೆ ಮಡ್ಡಿ. (ಚಂಡಿ ಎಂಬುದು ದಕ್ಷಿಣ ಕನ್ನಡಿಗರಿಗೆ ಒದ್ದೆ) ಆದರೆ ರೈನ್ ಕೋಟಿನೊಳಗೆ ಅವಿತಿಟ್ಟುಕೊಂಡು ಕಣ್ಣು ಪಿಳುಕಿಸುವ ಕಾನ್ವೆಂಟ್ ಕಂದಮ್ಮಗಳ ಲೋಕವೇ ಬೇರೆ. ಕೊಡೆಯೊಳಗಿನ ಧಬ ಧಬೆಗೇ ತಲೆಯಿಡುವವರು.

ಇಂಥ ಒಂದು ಬಿರುಮಳೆಯ ಸಂಜೆ ನಾನು ಕಾಫಿ ಹೀರುತ್ತಾ ಕುಳಿತಿರುವಾಗ ಪಕ್ಕದ ಮನೆಯ ಕಾನ್ವೆಂಟ್ ಬಾಲೆ ಬಂದು 'ಆಂಟೀ ನಾನೊಂದು ಹಾಡು ಬರ್ದಿದ್ದೀನಿ ನೋಡಿ' ಎಂದಿತು. ನೋಡಿದೆ.

*Rain rain come again*
*Forget about little john*
*Let him play some other day*
*We will get a holiday*

ವ್ಹಾರೆವ್ಹಾ.. ಮಳೆಯ ಪ್ರಭಾವವೇ.. ಶಿಶುಗಳೂ ಕವಿಗಳಾಗ್ತಿದ್ದಾರೆ ಅಂದ್ಕೊಂಡೆ. ರೈನ್ ರೈನ್ ಗೋ ಅವೇ ಎಂಬ ಹಾಡನ್ನು, ಈ ಹುಡುಗಿ ತನಗೆ ಸಿಗುವ ರೈನ್ ಹಾಲಿಡೇ ಆಸೆಯಲ್ಲಿ ರೂಪಾಂತರ ಮಾಡಿ ಹಾಡನ್ನು ರಚಿಸಿತ್ತು. ಹಾಡು ಫಸ್ಟ್ ಕ್ಲಾಸ್ ಆಗಿದೆ ಎಂದು ನಾನು ಅಂದ ಮೇಲೆ ಮಗು ಮನೆಗೆ ಹೋಯ್ತು.

ಆದರೆ ಮಕ್ಕಳಿಗಿರುವ ಈ ಉತ್ಸಾಹ ದೊಡ್ಡವರಿಗೂ ಅಕಸ್ಮಾತ್ ಇದ್ದಿದ್ದರೆ ಹೀಗಿರುತ್ತಿತ್ತೇ..? 'ಜ್ಯಾಡ್ಯ'ಗಳೇ ಕಡಿಮೆಯಾಗಿ ಅನೇಕ ಡಾಕ್ಟರುಗಳು ಬಾಗಿಲು ಹಾಕಬೇಕಾಗುತ್ತಿತ್ತು. ಉದಾಹರಣೆಗೆ, ನಮ್ಮ ಎದುರು ಮನೆ ವನಿತೆ. ಮಧ್ಯಾಹ್ನದ ನಾಲ್ಕು ಗಂಟೆಗೆ ಒಂದು ಭಯಂಕರ ಆಕಳಿಕೆ ಆ ಮನೆಯಿಂದ ಕೇಳಿ ಬರುತ್ತದೆ. ಆಗ ಪ್ರಾಣಿ ಎದ್ದಿದೆ ಎಂದು ಗೊತ್ತಾಗುತ್ತದೆ. ಅನಂತರ ರಾತ್ರಿ ಮಲಗುವ ತನಕ 'ಬೇಜಾರು ಮಾರಾಯ್ರೇ' ಎಂಬ ಹಾಡು. ಮಳೆ ಹೆಚ್ಚಾದಂತೆಲ್ಲಾ ಈ ಹಾಡು ಜೋರು. ''ಎಂತಾ ಮಳೇರೀ ಬೋರಾಗಿ ಹೋಯ್ತು'' ಎಂಬ ಸೊಲ್ಲನ್ನು ಕೇಳಿ ಕೇಳಿ ನಾನೊಂದು ದಿನ ಸಲಹೆ ಕೊಟ್ಟೆ, ''ಬೇಜಾರು ಅಂತ ಮನೆಯೊಳಗೇ ಕೂತ್ರೆ ಆಗುತ್ತೇನ್ರೀ, ಸೀದಾ ಎದ್ದು ಮಳೆಯಲ್ಲಿ ಪಚ ಪಚ ನೀರು ಸಿಡಿಸುತ್ತಾ ಒಂದು ರೌಂಡ್ ಹೋಗಿ ಬಂದು ಒದ್ದೆ ಮೈಯಲ್ಲಿ ಬಿಸಿ ಕಾಫಿ ಕುಡಿಯಿರಿ. ಸುರಿಯುವ ಮಳೆಗೆ ಮೈಯೊಡ್ಡಿದರೆ ವರ್ಷಾಂತರಗಳಿಂದ ಬಂದಿರೋ ಬೇಜಾರು ಸಹ ಬಿಟ್ಟು ಹೋಗಿ ಫ್ರೆಶ್ ಆಗಿ ಬಿಡುತ್ತೀರಿ'' ಎಂದು ತಣ್ಣಗೆ ನಾನು ಹೇಳಿದಾಗ ಹುಚ್ಚರನ್ನು ನೋಡುವ ಹಾಗೆ ನನ್ನನ್ನು ನೋಡಿ ಹೊರಟು ಹೋದರು.

> **ಯಾರು ನೆಟ್ಟಗಿರಲಿ ಸೊಟ್ಟಗಿರಲಿ ಮಳೆರಾಯನಿಗೆ ಅದೆಲ್ಲ ಲೆಕ್ಕಕ್ಕಿಲ್ಲ. ತನ್ನ ಮನಸ್ಸಿಗೆ ಬಂದಂತೆ ವಿವಿಧ ರೂಪ ತಾಳಿ ಸುರಿಯುವುದೇ ಮಳೆಯ ಗುರಿ.**

ಇನ್ನೊಂದು ದಿನ ಕಾಲೇಜಿನಿಂದ ಬರುವಾಗ ಮನೆ ಹತ್ತಿರವಾಗುತ್ತಿದ್ದಂತೆಯೇ ಮಳೆ ಜೋರಾಯಿತು. ಹಿಂದೂ ಮುಂದೂ ಯಾರೂ ಇಲ್ಲವೆಂಬ ಧೈರ್ಯದಲ್ಲಿ ನನ್ನ ದೈವದತ್ತ ಸ್ವರದಲ್ಲಿ 'ಜಿಂದಗೀ ಭರ್ ನಹೀ ಭೂಲೇಂಗೇ ವೋ ಭರ್ಸಾತ್ ಕಿ ರಾತ್' ಎಂದು ಹಾಡುತ್ತಾ ರಫಿಗೆ ಅಪಚಾರವಾದರೂ ಚಿಂತಿಲ್ಲವೆಂದು ಮಳೆಯ ರಾಗಕ್ಕೆ ನನ್ನ ರಾಗ ಸೇರಿಸಿಕೊಂಡು ಹೆಚ್ಚು ಕಡಿಮೆ ತೇಲುತ್ತಲೇ ಬರುತ್ತಿದ್ದೆ. ಎದುರು ಮನೆಯಿಂದ ಆಕಳಿಕೆ ಸದ್ದೂ ಕೇಳಲಾರದಷ್ಟು ಅವರಿಗೆ ನನ್ನ ಕುರಿತು ಅನುಮಾನವಿದ್ದಿತು ಎಂಬುದಕ್ಕೆ ಅವರು ನನ್ನತ್ತ ಬೀರಿದ ಕರುಣಾಪೂರ್ಣ ನೋಟದಿಂದಲೇ ತಿಳಿಯಿತು. ಏನು ಮಾಡುವುದು? ಜಗತ್ತಿನ ಅನುಕಂಪಕ್ಕೆ ಹೆದರಿ ಯಾವಾಗಲೂ ನೆಟ್ಟಗಿದ್ದರೆ ಸೊಟ್ಟಗಿರುವ ಸುಖ ಎಂಬುದೂ ಒಂದಿದೆ ಎಂದು ತಿಳಿಯುವುದಾದರೂ ಹೇಗೆ? ಸೊಟ್ಟದಾಗಿ ಹಾಡುತ್ತಲೇ ಒಳ ಹೊಕ್ಕೆ ನಾನು.

ಹಾಗೆ ಸುರಿಯುವ ಮಳೆಯಲ್ಲಿ ನೆನೆಸಿಕೊಂಡು ಹಾಡುತ್ತಾ ಬಂದು ಒಳ ಸೇರಿ ಬೆಚ್ಚಗೆ ಬಟ್ಟೆ ಬದಲಾಯಿಸಿ ಮಾರುದ್ದ ಲೋಟ ತುಂಬಾ ನೊರೆ ಕಾಫಿ ತುಂಬಿ ಸೊರ್ರೆನಿಸುತ್ತಾ ಕುಳಿತೆನೆಂದರೆ ಮಳೆಯಲ್ಲಿ ಅದು ಬ್ರಹ್ಮ ರಂಧ್ರಕ್ಕೆ ಏರಿದಂತೆಲ್ಲಾ ಗದ್ಯಗ್ರಂಥಿಯಾದ ನನಗೂ ಒಂದು ಬಗೆಯ ದಿಢೀರ್ 'ಆಂಗ್ಲಾಶುಕವಿತ್ವ' ಜಾಗೃತವಾಗಿ ಬಿಡುತ್ತದೆ.

*Ah! coffee*

*I am Because*

*Thou are*

ಎಂದು ಮೊದಲಾದ ಕವನವೆಂದುಕೊಂಡ ಸಾಲುಗಳನ್ನು ಬರೆದೇ ಬಿಡುತ್ತೇನೆ. ಹೊರಗೆ ಕತ್ತಲು ಕವಿದಿದ್ದರಂತೂ ಒಳಗೆ ಕೃತ್ರಿಮ ಕತ್ತಲು. ಟೇಬಲ್ ಲ್ಯಾಂಪ್ ಉರಿಸಿ ಚಂದಾಮಾಮ ಓದಿದರೂ ಒಂದು ಬಗೆಯ ದಿವ್ಯಾನುಭೂತಿ!

ಈ ಬಗೆಯ ದಿವ್ಯಾನುಭೂತಿಯಲ್ಲಿ ಮುಳುಗಿದ್ದೆ ಒಂದು ದಿನ. ನರಪಿಳ್ಳೆಯ ಸ್ವರವೊಂದು ನನ್ನನ್ನು ಕರೆಯುತ್ತಿದೆ. ನನಗೋ ನನ್ನ ಟೇಬಲ್ ಪಕ್ಕ ಒಂದು ಡ್ರಮ್ ನೊರೆ ಕಾಫಿ ಇದ್ದಂತೆ ಅದು ಎರಡು ಪೈಪ್‌ಗಳಿಂದ ಜೋಡಿಸಲ್ಪಟ್ಟಿದೆ. ಒಂದು ಸೀದಾ ನನ್ನ ಕುರ್ಚಿಗೆ. ಇನ್ನೊಂದು ಬೆಡ್ ಮೇಲ್ಗಡೆ. ಇನ್ನುಮೇಲೆ ಇಡೀ ವರ್ಷ ಮಳೆಗಾಲ ಎಂದು ವ್ಯವಸ್ಥೆಯಾದುದರಿಂದ ಒಂದು ವರ್ಷ ಪೂರ್ತಿ ಕಾಲೇಜಿಗೆ 'ರೈನ್ ಹಾಲಿಡೇ' ಘೋಷಿಸಿದ್ದಾರೆ — ಹೀಗೆ ಒಂದಲ್ಲ ಎರಡಲ್ಲ.. ಸಾಲಾಗಿ ಬರುತ್ತಿರುವ ಹಗಲು (ಗತ್ತಲಿನ) ಕನಸುಗಳಲ್ಲಿ ನಾನು ಹೂತು ಹೋಗಿದ್ದೆ. ಹೊರಗಿನಿಂದ ಕರೆಯುತ್ತಿರುವ ನರಪಿಳ್ಳೆಯ ಸ್ವರ ಏಕೋ ಅಪಶಕುನದ ಸ್ವರದಂತೆ ಕೇಳಿಸಿತು. ಬಾಗಿಲು ತೆಗೆದರೆ ಪಿಳ್ಳೆಯೊಂದು ಕೊಡೆ ಹಿಡಿದೇ ನಿಂತು 'ಹಸಿಮೆಣಸಿನಕಾಯಿ ಇದ್ದರೆ ಕೊಡ್ಬೇಕಂತೆ. ಮಾರ್ಕೆಟ್ಟಿಗೆ ಹೋಗಲು ಅಮ್ಮನಿಗೆ ಬೇಜಾರಂತೆ' ಎಂದಿತು.

ಆ ಪಿಳ್ಳೆ ಮಗುವೇನಾದರೂ ಆಗಿರದಿದ್ದರೆ ಅದರ ಕುತ್ತಿಗೆ ಹಿಚಿಕಿ ಬಿಡುತ್ತಿದ್ದೆ. ಅವರಮ್ಮನ ಕುತ್ತಿಗೆ ಹಿಚುಕುವುದೇ ಸೂಕ್ತವೆಂದು ತೋರಿದ್ದರಿಂದ ''ಹಸಿಮೆಣಸು ಅಂದ್ರೆ ಏನಂತ್ಲೇ ಅವರಿಗೆ ಗೊತ್ತಿಲ್ಲವಂತೆ. ಅಂಥದ್ದೆಲ್ಲ ಹುಡುಕುವ ಮನಸ್ಥಿತಿಯಲ್ಲೂ ಅವರಿಲ್ಲವಂತೆ'' ಎಂದು ಹೇಳು ಹೋಗು ಎಂದು ದಬ್ಬಿ ಬಾಗಿಲು ಹಾಕಿಕೊಂಡೆ.

ಆ ಮಗು ಹೋಗಿ ಅದರಮ್ಮನ ಬಳಿ ''ಅವರಿಗೆ ಹಸಿಮೆಣಸು ಅಂದ್ರೆ ಏನಂತ ಗೊತ್ತಿಲ್ಲವಂತೆ'' ಎಂದಾಗ ಮೊದಲೇ ಒಂದೆರಡು ಪ್ರಕರಣಗಳಲ್ಲಿ ನನ್ನ ಸೊಟ್ಟ ತಲೆಯ ಬಗ್ಗೆ ಅನುಮಾನವೆದ್ದಿದ್ದ ಆಕೆಗೆ ಈಗಂತೂ ಪ್ರಮಾಣಪೂರ್ಣ ಆಧಾರವೆ ದೊರಕಿದಂತಾಯ್ತು. ಮರುದಿನದಿಂದ ಆಕೆ ನನ್ನತ್ತ ಬೀರುತ್ತಿದ್ದ ಕರುಣಾಪೂರ್ಣ ನೋಟದಲ್ಲಿ ಕರುಣೆಯ ಸಾಂಧ್ರತೆ ಹೆಚ್ಚಿದಂತೆನಿಸಿತು.

ಯಾರು ನೆಟ್ಟಗಿರಲಿ ಸೊಟ್ಟಗಿರಲಿ ಮಳೆರಾಯನಿಗೆ ಅದೆಲ್ಲ ಲೆಕ್ಕಕ್ಕಿಲ್ಲ. ತನ್ನ ಮನಸ್ಸಿಗೆ ಬಂದಂತೆ ವಿವಿಧ ರೂಪ ತಾಳಿ ಸುರಿಯುವುದೇ ಮಳೆಯ ಗುರಿ. ಒಂದೊಂದು ದಿನ ಒಂದೊಂದು ರೂಪ ಈ ಮಳೆಗೆ. ಧೋ ಎಂದು ಸುರಿಯುವ ಉದ್ದ ದಪ್ಪ ಹನಿಗಳ ಮುಸಲಧಾರೆ. ರಪರಪ ಎಂದು ರಾಚುವ ಭಾರೀ ಬಿರುಮಳೆ. ಜಿಟಿ ಜಿಟಿ ಎಂದು ಬಿಡದೇ ಸೋನೆ ಹಿಡಿಯುವ ತಿರಿ ತಿರಿ ಮಳೆ. ಎಲ್ಲಾ ಬಗೆಯ ಮಳೆಯ ದಿನಗಳನ್ನು ಈ ಬಾರಿ ಕಂಡದ್ದಾಯ್ತು. ಒಂದೊಂದು ದಿನವೂ ಬೆಳಗೋ ಸಂಜೆಯೋ ತಿಳಿಯದ ಹಗಲುಗತ್ತಲು.

ಮತ್ತೆ ಮಳೆ ಮತ್ತೆ ಕತ್ತಲು. ಹೀಗೆ ಮಳೆ ಮೋಡದಾಟ. ಅದನ್ನು ನೋಡುತ್ತಾ ಕುಳಿತರೆ ಪಾಠ ಮಾಡುವವರಾರು? ಕ್ಲಾಸೊಂದಕ್ಕೆ ಹೋಗಿ ನಿಂತೆ.

ಆ ರೂಮಿದ್ದುದ್ದೇ ಒಂದು ಮೂಲೆಯಲ್ಲಿ. ಗಾರ್ಡನ್ನಿನ ಆಚೆ. ಗಿಡಮರದ ಕತ್ತಲು, ಕವಿದ ಮೋಡಗಳ ಕತ್ತಲು, ಕ್ಲಾಸು ರೂಮು ಕತ್ತಲೆ ಕೋಣೆಯಂತೆಯೇ ಇತ್ತು. ಒಣ ಇಂಗ್ಲೀಷ್ ಗದ್ಯದಲ್ಲಿ ಅಂತರ ರಾಷ್ಟ್ರೀಯ ವ್ಯಾಪಾರ ಇತ್ಯಾದಿಗಳ ಬಗ್ಗೆ ಕೊರೆಯಲು ಮನಸ್ಸೇ ಬರುವಂತಿರಲಿಲ್ಲ. ಯಾರಾದ್ರು ಭಾವಗೀತೆ ಹಾಡುವವರಿದ್ದರೆ ಹಾಡಿಸಿ ಬಿಡುವ ಎಂಬಷ್ಟು ಮನಸ್ಸು 'ಗದ್ಯ ವಿಮುಖೀ ಧೋರಣೆ' ತಾಳಿ ಬಿಟ್ಟಿತ್ತು. ಆದರೆ 'ಹಾಡೇಳಿಸೋದು ಅಂದ್ರೆ ಇದೇನು ಪ್ರೈಮರಿ ಸ್ಕೂಲ್ ಕೆಟ್ಟೋಯ್ತೇ' ಎಂದು ಯಾರಾದರು ಬೈದರೆ? ನಿತ್ಯದ ಗೋಳು ಕರೆಯನ್ನೇ ಪ್ರಾರಂಭಿಸುವುದೆಂದಿದ್ದೆ.

ಆದರೆ ಮುಂದಿನ ಸಾಲಿನ ಹುಡುಗ ಹುಡುಗಿಯರನ್ನು ಬಿಟ್ಟರೆ ಹಿಂದಿನವರು ಯಾರೂ ಕಾಣುತ್ತಲೇ ಇರಲಿಲ್ಲ. ಅನುಮಾನವಾಯ್ತು. ''ಲ್ರೋ.. ಲಾಸ್ಟ್ ಬೆಂಚ್.. ನಾನು ಕಾಣ್ತಿದೀನೇನ್ರೋ...?'' ಎಂದು ಕೇಳಿದೆ. ''ಇಲ್ಲಾ ಮೇಡಮ್'' ಎಂದವು ಕೋರಸ್ಸಿನಲ್ಲಿ. ಹಿಂದಿನ ಬೆಂಚಿನಲ್ಲಿ ಮಕ್ಕಳು ಕೂತಿದ್ದು ನಿಜ ಅಂತಾಯ್ತು. ಕಾಣಿಸದಿದ್ರೇನಾಯ್ತು, ಪಾಠ ಮಾಡಿದರಾಯ್ತು ''ನಾನು ಕೇಳಿಸಿಯಾದ್ರೂ ಕೇಳಿಸ್ತೀನಾ?'' ಎಂದೆ.

''ಕೇಳಿಸ್ತೀರಿ ಮೇಡಂ'' ಎಂದವು ಕೋರಸ್ಸಿನಲ್ಲಿ. ಸರಿ.. ಪಾಠ ಮಾಡಲು ಶುರು ಮಾಡಿದೆ. ಅಷ್ಟರಲ್ಲಿ ಮಾಡು ಹರಿದು ಬೀಳುವಷ್ಟು ಸಪ್ಪಳ ಮಾಡುತ್ತಾ ಮುಸಲಧಾರೆ ನಿಜಕ್ಕೂ ಒನಕೆ ಕುಟ್ಟಿದ ಸಪ್ಪಳದೊಂದಿಗೆ ದಫ ಧಪ ಬೀಳತೊಡಗಿತು. ನನ್ನ ಸ್ವರ ನನಗೇ ಕೇಳಿಸದಂತಾಯ್ತು. ಇನ್ನು ಮಕ್ಕಳಿಗೆಲ್ಲಿ ಕೇಳಬೇಕು? ಕಿಟಕಿಯಿಂದ ಒಳ ತೂರಿ ಬಂದ ಮಳೆ ಹುಡುಗಿಯರನ್ನು ತೋಯಿಸಿ ಹಾಕಿತು. ಹುಡುಗಿಯರೇ 'ಅಯ್ಯಯ್ಯೋ' ಎಂದರೆ ಹುಡುಗರು 'ಹೋ' ಎನ್ನತೊಡಗಿದರು. ರೈನ್ ಹಾಲಿಡೇ ಡಿಕ್ಲೇರ್ ಆಗಿತ್ತು.



ಹೊರಗೆ ಬಂದರೆ ಅವತ್ತಿನ ಮಳೆ ಹುಚ್ಚು ಮಳೆ. ''ಮಳೆಯಲ್ಲಿ ನಡೆಯಬೇಕೆನ್ನುತ್ತಿದ್ದೀಯಲ್ಲ, ಧೈರ್ಯವಿದ್ದರೆ ಇವತ್ತು ವಾಕ್ ಮಾಡು ನೋಡೋಣ'' ಎಂದು ದೇಹಕ್ಕೆ ಮನಸ್ಸು ಸವಾಲು ಎಸೆಯಿತು. ದೇಹ ರೆಡಿ ಅಂದಿತು. ಹೇಗೂ ಗೇಣಗಲದ ಕೊಡೆ ಎಂಬ ವಸ್ತುವಂತೂ ಇದೆಯಲ್ಲ, ತಲೆಯ ಮೇಲೆ ಹಿಡಿದು ನಡೆಯತೊಡಗಿದೆ. ಒಮ್ಮೆಲೆ ನಮ್ಮೂರಿನ ಅಡಿಕೆ ತೋಟದ ಹೆಗ್ಗಾದಿಗೆಗಳಲ್ಲಿ ತುಂಬಿ ಹರಿಯುವ ನೀರಿನ ಸಪ್ಪಳ ಮನಸ್ಸಿನೊಳಗೆ ರಿಂಗಣಿಸತೊಡಗಿತು. ತೇಲತೊಡಗಿದೆ ಮನೆಯತ್ತ. ಮಳೆಗಾಲ ಪ್ರಾರಂಭವಾದಂದಿನಿಂದಲೂ ನನಗೆ ಆಗಾಗ ಒಂದು ಹುಚ್ಚು ಬಯಕೆ ಏಳುತ್ತಿತ್ತು.

ಸುಳ್ಳೇ ಸಮಾಧಾನ ನೀಡುವ ಈ ಗೇಣಗಲದ ನೈಲಾನ್ ಕೊಡೆಯನ್ನೊಮ್ಮೆ ಬಿಸಾಕಿ ಬೀಸಾಗಿ ಹೆಜ್ಜೆ ಹಾಕಬೇಕು. ಚೂರೂ ಮರೆಯಿಲ್ಲದ ನೇರ ಪ್ರಹಾರಕ್ಕೆ ಈ ಹುಲು ದೇಹ ಹೇಗೆ ಪ್ರತಿಕ್ರಿಯಿಸಿತು ಎಂಬೆಲ್ಲ ಪ್ರಯೋಗ ಮಾಡಬೇಕೆನ್ನಿಸಿತ್ತು. ನಮ್ಮೂರ ಗದ್ದೆ ತೋಟಗಳಲ್ಲಿ ಹಾಗೆ ಮಾಡಬಹುದು. ಈ ನಗರಗಳಲ್ಲಿ ಗಿಜಿಗುಟ್ಟುವ ನಾಗರಿಕರ ನಡುವೆ! ''ಛೇ.. ಎಂತಹ ಅಸಾಧು ಯೋಚನೆಗಳು, ತೆಪ್ಪಗೆ ಬಿದ್ದಿರು ಮನಸ್ಸೇ ನಿನಗನ್ನಿಸಿದ್ದನ್ನೆಲ್ಲಾ ಮಾಡಿದರೆ ಮುಗಿಯಿತು ಕತೆ'' ಎಂದು ಗದರಿಸಿ ಕೊಡೆ ಹಿಡಿದೇ ಓಡಾಡುತ್ತಿದ್ದೆ. ಆದರೆ ಮನಸ್ಸಿಗೆ ಅಂತಹ ಶಕ್ತಿ ಇದೆ. ತನಗೆ ಬೇಕೆನ್ನಿಸಿದ್ದನ್ನು ಪಡೆದೇ ತೀರುತ್ತದೆ ಎಂಬುದು ಅವತ್ತು ಗೊತ್ತಾಯ್ತು.

ನಾಗರೀಕರ ಕೇಂದ್ರ ತಾಣಗಳನ್ನೆಲ್ಲಾ ಹಾದು ಜನ ಸಂಚಾರ ಅಷ್ಟಿಲ್ಲದ ಮನೆಯ ದಾರಿಯತ್ತ ಹೆಜ್ಜೆ ಹಾಕುತ್ತಿದ್ದೆ. ಮಳೆ ಸುರಿಯುತ್ತಲೇ ಇತ್ತು. ಸಮುದ್ರದಿಂದ ನೇರ ಎದ್ದ ಗಾಳಿಯೊಂದು ನನ್ನನ್ನು ಸವರಿಕೊಂಡು ಹೋದಂತಾಯ್ತು. ನೋಡುವಷ್ಟರಲ್ಲಿ ನನ್ನ ಗೇಣಗಲದ ಕೊಡೆ ನನಗೆ ತಿರುಗಿ ಬಿದ್ದಿದೆ. ಕತೆ ಕಾದಂಬರಿ ಪಾತ್ರಗಳಲ್ಲಿ 'ತಿರುಗಿ ಬಿದ್ದವು' ಎನ್ನುತ್ತಾರಲ್ಲ ಹಾಗೆ ನಡುದಾರಿಯ ಬಟ್ಟ ಬಯಲಲ್ಲಿ ನನ್ನ ಕೊಡೆ ಬಂಡಾಯ ಎದ್ದು ತಿರುಗಿ ಬಿದ್ದು ನನ್ನನ್ನು ಮಳೆಯಲ್ಲಿ ತೆರೆದಿಟ್ಟಿದೆ. ಹೀಗೆ ಬಿರುಗಾಳಿ, ಬಂಡಾಯ, ತಿರುಗಿ ಬೀಳುವುದು ಎಲ್ಲವೂ ಒಮ್ಮೆಲೇ ಘಟಿಸಿ ಕ್ರಾಂತಿಯಾಗಿತ್ತು. ಮನಸ್ಸಿಗೆ ಮಾತ್ರ ಹುಚ್ಚು ಸಂತೋಷ. (ಕ್ರಾಂತಿಯಾದ ಬಳಿಕ ಬದಲಾವಣೆ ತರುವ ಸಂತೋಷ ಹೀಗೇ ಇರಬಹುದೆ?) ತಾನಾಗಿಯೇ ಬಂದ ಅವಕಾಶ ಆಚೀಚೆ ನೋಡಿದೆ. ಬಟ್ಟ ಬಯಲಿನ ಟಾರು ರೋಡು ನರಸಂಚಾರವಿಲ್ಲ, ಮಳೆಯ ಧಾರೆ ಭುವಿ ಬಾನುಗಳಿಗೆ ಸೇತುವೆಯಾಗಿದೆ. 'ಪಂಛಿ ಬನೂ ಉಢುತೆ ಫಿರೂ ಮಸ್ತ್ ಗಗನ್ ಮೆ' ಎಂದೆನ್ನಿಸತೊಡಗಿತು. ತಿರುಗಿ ಬಿದ್ದ ಕೊಡೆಯ ಕಳೇಬರ ಹೊತ್ತು ಗತ್ತಿನಲ್ಲಿ ಹೆಜ್ಜೆ ಹಾಕತೊಡಗಿದೆ.

'ಹುಚ್ಚು ಮಳೆಯಲ್ಲಿ ಹೊತ್ತು ನಡೆದಳು ಕೆಟ್ಟ ಕೊಡೆಯ ಅಸ್ಥಿ ಪಂಜರ'

ಎಂದೆಲ್ಲಾ ಏನೇನೋ ಹಾಡುಗಳು ಯಕ್ಷಗಾನದ ಧಾಟಿಯಲ್ಲಿ ಹುಟ್ಟಿಬರತೊಡಗಿದವು. ಅಂತೂ ಬಲು ದಿನದ ಆಸೆಯೊಂದು ನೆರವೇರಿದ ಮತ್ತಿನಲ್ಲಿ ತೇಲುತ್ತಿದ್ದೇನೆಂದು ಭಾವಿಸಿಕೊಳ್ಳುತ್ತಾ ಹೆಜ್ಜೆ ಹಾಕುತ್ತಿದ್ದೆ. ನಿಮ್ಮ ಪಾಡಿಗೆ ನಿಮಗಿಷ್ಟ ಬಂದ ಹಾಗೆ ಸಂತೋಷಿಸುತ್ತೇನೆ ಎಂದರೆ ಬಿಟ್ಟೀತೇ ಈ ನರಲೋಕ?

ನನ್ನ ಬಳಿಯೇ ಆಟೋವೊಂದು ಬಂದು ನಿಂತಿತು. ''ಹತ್ಕೊಳ್ಳಿ ಮೇಡಂ ಎಲ್ಲಿ ಬಿಡಬೇಕು ಹೇಳಿ'' ಎಂದಿತು ಪರೋಪಕಾರಿ ಧ್ವನಿ. 'ತಂದ್ಯಲ್ಲಪ್ಪ ಸಂಚಕಾರ' ಎಂದುಕೊಂಡೆನಾದರೂ ಹಾಗೇ ಹೇಳಲಾದೀತೇ? ತಡಬಡಿಸಿದೆನಿರಬೇಕು. ''ಪರ್ವಾಗಿಲ್ಲ ಮೇಡಂ ಎಷ್ಟು ಬೇಕಾದ್ರು ಕೊಡಿ ಮಳೆ ನೋಡಿ ಹೇಗೆ ಸುರೀತಿದೆ ನಿಮ್ಮ ಕೊಡೆ ಹಾಳಾಗಿ ನೆನೆದುಕೊಂಡು ಹೋಗ್ತಿರೋದು ನೋಡಿ ನಿಲ್ಲಿಸಿದೆ'' ಎಂದ ಆಟೋದವ. ಮಾಡುವುದೇನು? ಹತ್ತಿ ಕೂತು ಇಂತಲ್ಲಿಗೆ ಬಿಡು ಎನ್ನಬೇಕಾಯ್ತು. ಮನೆಯ ಗೇಟಿನೊಳಗೆ ರಿಕ್ಷಾ ಹೋಗುವುದಿಲ್ಲವಾದರಿಂದ ಹಿಂದೇ ಇಳಿದು ಒದ್ದೆ ಹಣ ಕೊಟ್ಟು ಮತ್ತೆ ಮನದಲ್ಲಿ 'ಮಳೆಯಲ್ಲೇ ಮನೆಗೆ ಬಂದಳು' ಎಂಬಂತೆ ತೇಲತೊಡಗಿದೆ.

ದೂರದಿಂದಲೇ ನನ್ನನ್ನು ಗಮನಿಸುತ್ತ ನಿಂತಿದ್ದರು ಎದುರು ಮನೆಯ ಹಸಿಮೆಣಸಿನಕಾಯಿ. ಕೊಡೆ ಹಾಳಾಗಿದ್ದಕ್ಕೆ ಚೂರೂ ಬೇಸರಿಸದೇ ಓಡುತ್ತಲೂ ಬರದೇ ನೆನೆಯುವುದೇ ಪರಮೋದ್ದೇಶವೆಂಬಂತೆ ನಿಧಾನಕ್ಕೆ ಬರುತ್ತಿರುವ ನನ್ನನ್ನು ನೋಡಿದ ಅವರಿಗೀಗ ಚೂರೂ ಅನುಮಾನವೇ ಉಳಿಯಲಿಲ್ಲ ಎಂಬುದು ಅವರು ನನ್ನತ್ತ ಬೀರಿದ ಕರುಣಾತಿಶಯದ ದೃಷ್ಟಿಯಿಂದ ವ್ಯಕ್ತವಾಗುತ್ತಿತ್ತು. ಇದ್ಯಾವುದನ್ನು ಲೆಕ್ಕಿಸದ ಮಳೆ ಸುಮ್ಮನೆ ಸುರಿಯುತ್ತಿತ್ತು.

✵

---

## ಮಳೆ ಎಂದರೆ.....

ಓಹೋ ಕಾಲಪುರುಷಂಗೆ ಶರೀರದಲ್ಲಿ ಆರೋಗ್ಯವಿಲ್ಲವೇ, ಕಾಂತಿಹೀನನಾಗಿದ್ದಾನಲ್ಲವೇ. ಅವನಿಗೆ ಲವಲವಿಕೆ ಇಲ್ಲವೇ. ಹೊಟ್ಟೆಯೊಳಗೇನೋ ಗುಡುಗುಡು ಶಬ್ದವಾಗುತ್ತಿದೆಯಲ್ಲ. ಇದೇನು ಅರಮನೆಯ ಬಾಗಿಲನ್ನು ಮೋಡದ ತೆರೆಯಿಂದ ಮುಚ್ಚಿದ್ದಾರೆಯೇಕೆ? ಯಾರಿಗೂ ಒಳಗೆ ಹೋಗಲು ಅನುಮತಿಯಿಲ್ಲದಿರಬಹುದು. ಅಪ್ಸರ ಸ್ತ್ರೀಯೊಬ್ಬಳು ಚಂಚಲವಾದ ಕಣ್ಣುಗಳಿಂದ ಎಲ್ಲ ಕಡೆಗೂ ನೋಡುತ್ತಿದ್ದಾಳೆ (ಮಿಂಚು) ಔಷಧದ ಮೂಲಿಕೆಯನ್ನು ಕಿತ್ತುಕೊಂಡು ಹೋಗುವುದಕ್ಕೋ ಏನೋ (ಅವಳಿಗೆ ಮೂಲಿಕೆ ಆಯಲು ಸಹಾಯವಾಗಲೆಂದು) ಸಿಡಿಲು ಎಂಬ ಸೈನಿಕನು ಮಧ್ಯೆ ಇರುವ ಬೆಟ್ಟಗಳ ಮೇಲೆ ತುಂಬ ಆರ್ಭಟದಿಂದ ಬಂದು ಅಪ್ಪಳಿಸುತ್ತಿದ್ದಾನೆ. ಏನು ರೋಗವೋ. ಸುಗ್ಗಿಯಲ್ಲಿ ಉಂಡಿದ್ದನ್ನು ಮಳೆಗಾಲದಲ್ಲಿ ಕಾರುತ್ತಿರಬೇಕು. ಹೀಗೆ ಮುಂಗಾರು ತಲೆದೋರಲು ಭೂಮಿಯೆಂಬ ಹೆಣ್ಣಿಗೆ ಮೋಡಗಳೆಂಬ ವಿಡನೊಂದಿಗೆ ಅಧಿಕಗೊಳ್ಳುತ್ತಿರುವ ಬಾಂಧವ್ಯದಿಂದ ಬಿಳಿಯ ಬಣ್ಣದಿಂದ ಸುರಿಯುವ ಸುಖದ ಕಣ್ಣೀರೋ ಎಂಬಂತೆ ಹೊಳೆ ತುಂಬಿ ನೀರು ಪ್ರವಾಹವಾಯಿತು.

*(ಮುದ್ದಣನ ಶ್ರೀ ರಾಮೇಶ್ವಮೇಧದಿಂದ)*

# ಘಂಟಾಯಣ

**- ಸುಧಾ ಸರನೋಬತ್**

**ರಾ**ತ್ರಿ ಎರಡು ಗಂಟೆಯ ಸಮಯ. ಟ್ರಿನ್ ಟ್ರಿನ್ ಟ್ರಿನ್ ಕಾಲಿಂಗ್ ಬೆಲ್ ಸದ್ದು. ಯಾರಪ್ಪಾ ಈ ಅಪರಾತ್ರಿಯಲ್ಲಿ? ಯಜಮಾನರು ಕುತೂಹಲಭರಿತರಾಗಿ ಸಣ್ಣಗೆ ನಡುಗುತ್ತಾ ಬಂದು ಬಾಗಿಲು ತೆಗೆದಾಗ ಅಲ್ಲಿ ಯಾರೂ ಇಲ್ಲ. ನಾನು ಹಾಸಿಗೆಯಲ್ಲೇ ಬಿದ್ದು ಸಣ್ಣಗೆ ಬೆವರುತ್ತಿದ್ದೆ. ಯಾರೂ ಇಲ್ಲ ಅಂತ ಅರಿತಾಗ ಯಜಮಾನರು ನಿಟ್ಟುಸಿರುಬಿಡುತ್ತಾ ಒಳಗೆ ಬಂದರು.

ಹೊರಗೆ ಯಾರೂ ಇಲ್ಲ ಕಣೆ. ಎಲ್ಲೋ ಪಕ್ಕದ್ಮನೆ ಸದ್ದು ಇರಬೇಕು. ಅವರ ಮಗ ಮನೆಗೆ ತಡವಾಗಿ ತಾನೇ ಬರೋದು ಅವನೇ ಬೆಲ್ ಮಾಡಿರಬೇಕು. ಸುಮ್ನೆ ಮಲ್ಕೋ ಹೆದರಬೇಡ ಅಂದರು. ಯಜಮಾನರು ಅವರು ಹೆದರಿ ಬೆವೆತುಕೊಂಡಿದ್ದರೂ ನನ್ನನ್ನು ಸಮಾಧಾನ ಮಾಡಿದರು. ನಿದ್ದೆ ಹತ್ತಿತು. ಬೆಳಗಿನ ಜಾವ, ಸೊಂಪಾದ 3 ಗಂಟೆಯ ನಿದ್ರಾ ಸಮಯ. ಮತ್ತದೇ ಟ್ರಿನ್ ಟ್ರಿನ್ ಟ್ರಿನ್ ಕಾಲಿಂಗ್ ಬೆಲ್ ಸದ್ದು. ನಮ್ಮದೇ ಕರೆಗಂಟೆಯ ಸದ್ದು ಅನುಮಾನವೇ ಇಲ್ಲ. ಯಜಮಾನರು ಹಾಸಿಗೆಯಿಂದಲೇ ಉತ್ತರಿಸಿದರು. ಇಬ್ಬರೂ ಒಟ್ಟಿಗೇ ಹೋಗಿ ನೋಡೋಣ. ಕಳ್ಳ ಹೊರಗೆ ನಿಶ್ಚಿಂತೆಯಿಂದ ನಿಂತಿರಬಹುದು. ಆದರೆ ನಾವಿಬ್ಬರೂ ನಾಲ್ಕರ ಛಳಿ ಬಂದಂತೆ ನಡುಗುತ್ತಾ ನಮ್ಮ ಅಲ್ಪ ಪ್ರಾಣವನ್ನು ಕೈಯಲ್ಲಿ ಹಿಡಿದು ಬಾಗಿಲು ತೆಗೆದೆವು. ಯಜಮಾನರು ತಮ್ಮ ಆತ್ಮರಕ್ಷಣೆಗೆಂದು ತಂದಿದ್ದ ದೊಣ್ಣೆಯನ್ನು ಬಲವಾಗಿ ಬೀಸಿದರು. ಆ ಶಬ್ದಕ್ಕೆ ಅಲ್ಲಿಯೇ ಮಲಗಿದ್ದ ಕರಿಬೆಕ್ಕೊಂದು ಛಂಗನೆ ಕಾಂಪೌಂಡ್ ಹಾರಿ ಹೊರಗೋಡಿತು. ಯಜಮಾನ್ರಿಗೆ ಗಾಳಿಯಲ್ಲಿ ಗುಂಡು ಹಾರಿಸಿ ಕಳ್ಳನನ್ನು ಓಡಿಸಿದಷ್ಟೇ ಸಂತಸವಾಗಿತ್ತು. ಆದರೂ ನಡುಗುವುದು ನಿಂತಿರಲಿಲ್ಲ. ನನ್ನ ಹತ್ತಿರವಿದ್ದ ದುಪ್ಪಟ್ಟಾ ಹೊದಿಸಿ ಒಳಗೆ ಕರೆತಂದು ಯಾರೂ ಇಲ್ಲ ಮಲಗಿಕೊಳ್ಳಿ ಅಂತ ಸಮಾಧಾನ ಮಾಡಿದೆ.

ಮತ್ತೆ ಅರ್ಧ ಗಂಟೆಗೆ ಟ್ರಿನ್ ಟ್ರಿನ್ ಟ್ರಿನ್ ಕಾಲಿಂಗ್ ಬೆಲ್ ಸದ್ದು. ಯಜಮಾನರು ಹಾಸಿಗೆಯಲ್ಲಿ ಎದ್ದು ಕುಳಿತು ಸಣ್ಣಗೆ ಉಲಿದರು. ಇದು ಯಾರೋ ಕಳ್ಳರದೇ ಕರಾಮತ್ತು ಇರಬಹುದು ಅಂದರು. ಕಳ್ಳರೇನು ಕಾಲಿಂಗ್ ಬೆಲ್ ಮಾಡಿ ಬರುತ್ತಾರಾ? ಅನ್ನೋ ನನ್ನ ಪ್ರಶ್ನೆಗೆ ಯಜಮಾನರು ಬೆವೆತ ಮುಖದಿಂದ ಸಣ್ಣಗೆ ನಡುಗುತ್ತಾ ಈಗ ಕಾಲ ತುಂಬಾ ಕೆಟ್ಟುಹೋಗಿದೆ. ಕಳ್ಳರು ಯಾವಾಗ ಹೇಗೆ ಯಾವ ಸಮಯದಲ್ಲಿ ಯಾರ ರೂಪದಲ್ಲಿ ಬರುತ್ತಾರೋ ಗೊತ್ತೇ ಆಗುವುದಿಲ್ಲ ಎಂದರು. ಹೌದು ನಿಜಕ್ಕೂ ದಿಟ. ರಾಝುಕಾರಿಣಿಗಳ ರೂಪದಲ್ಲಿ ಬಿಳಿ ಅಂಗಿ, ಗಾಂಧಿ ಟೋಪಿ ಧರಿಸಿ ಹಗಲಿನಲ್ಲಿಯೇ ದರೋಢೆ ಮಾಡಲು ಬರುತ್ತಾರಲ್ಲವೇ? ನನ್ನ ಮನದಲ್ಲಿ ಎದ್ದ ಪ್ರಶ್ನೆಯನ್ನು ಅಲ್ಲಿಯೇ ಅದುಮಿದೆ.

ಇಬ್ಬರೂ ಕೈ ಕೈ ಹಿಡಿದುಕೊಂಡೆವು. ಮೊದಲು ಮನೆಯ ಎಲ್ಲಾ ಲೈಟ್‌ಗಳನ್ನು ಹಚ್ಚಿದೆವು. ಆಕಸ್ಮಾತ್ ಕಳ್ಳನೇ ಬಂದಿದ್ದರೆ ನಮ್ಮ ಮುಖ ಅವನಿಗೂ ಅವನ ಮುಖ ನಮಗೂ ಕಾಣಲೆಂದು ಟಾರ್ಚನ್ನು ಕೈಯಲ್ಲಿ ಹಿಡಿದುಕೊಂಡೆವು. ನಮ್ಮಲ್ಲಿದ್ದ ಧೈರ್ಯವನ್ನೆಲ್ಲಾ ಒಟ್ಟುಗೂಡಿಸಿ ಬಾಗಿಲು ತೆಗೆದೆವು ನೋಡುತ್ತೇವೆ! ಮಹದಾಶ್ಚರ್ಯವಾಯಿತು. ಅಲ್ಲಿ ಯಾರೂ ಇರಲಿಲ್ಲ. ಗೇಟ್‌ವರೆಗೂ ಹೋಗಿ ಯಜಮಾನರು ನೋಡಿ ಬಂದರು. ಬೀದಿ ನಾಯಿಯೊಂದು ಬೊಗುಳುತ್ತಾ ನಿಂತಿತ್ತು. ಬಾಗಿಲನ್ನು ಭದ್ರವಾಗಿ ಹಾಕಿಕೊಂಡು ಮಲಗಿದೆವು. ಅರ್ಧ ಗಂಟೆ ಆಗಿರಬಹುದು. ಮತ್ತದೇ ಕಾಲಿಂಗ್ ಬೆಲ್ ಕಿರುಚಿತು. ಈ ಸಾರಿ ಯಜಮಾನರೊಬ್ಬರೇ ಧೈರ್ಯ ಒಟ್ಟುಗೂಡಿಸಿ ಕಿಟಕಿಯ ಸಂದಿಯಿಂದ ನೋಡಿದರು. ಅಲ್ಲಿ ಯಾರೂ ಇಲ್ಲ. ನಮ್ಮಿಬ್ಬರಿಗೂ ಸಣ್ಣಗೆ ನಡುಕ ಶುರುವಾಯಿತು. ಯಾರೋ ಕಿಡಿಗೇಡಿಗಳು ನಮ್ಮನ್ನು ಹೆದರಿಸಲು ಈ ರೀತಿ ಮಾಡುತ್ತಿರಬಹುದೇ ಅಂತ. ಆದರೆ ಅದು ಅಸಾಧ್ಯ. ಏಕೆಂದರೆ ನಮ್ಮ ಮನೆಯ ಕಾಂಪೌಂಡ್ ಗೋಡೆ ತುಂಬಾ ಎತ್ತರವಿದ್ದು ಹಾರಿಬರಲು ಅಸಾಧ್ಯ. ಯಾವುದಾದರೂ ದೆವ್ವದ ಕಾಟ, ಮಾಟ, ಮಂತ್ರ ಇರಬಹುದೇ. ಮಾಟ ಮಂತ್ರವೇ ಆಗಿದ್ದಲ್ಲಿ ನಮ್ಮ ಮಾಜೀ ಮುಖ್ಯಮಂತ್ರಿಯವರಿಂದ ಸಲಹೆ ಪಡೆಯೋಣವೇ? ಸಲಹೆ ಅಲ್ಲ ಅದಕ್ಕೆ ಪರಿಹಾರ ಕೇಳೋಣವೇ? ಛೆ ಅವರನ್ನೇನು ಕೇಳೋದು. ಅವರಿಗೆ ಮಾಟ ಮಂತ್ರ ಮಾಡಿಸಿದವರನ್ನು ಕೇಳಬೇಕು ಅಥವಾ ಪ್ರಖ್ಯಾತ ಜ್ಯೋತಿಷಿಯನ್ನು ಭೇಟಿ ಮಾಡಿ ಇದಕ್ಕೆ ಪರಿಹಾರ ಮಾಡಿಸಿ ಬರೋಣವೇ? ಈ ಎಲ್ಲಾ ಪ್ರಶ್ನೆಗಳೂ ನನ್ನ ಮನದಲ್ಲಿ ಎದ್ದು ಅಲ್ಲಿಯೇ ಮಸಣ ಸೇರಿದವು. ಯಜಮಾನರು ರಾತ್ರಿಯೆಲ್ಲಾ ನಿದ್ರೆಗೆಟ್ಟು ಈಗ ಚೆನ್ನಾಗಿ ಗೊರಕೆ ಹೊಡೆಯುತ್ತಿದ್ದರು. ನಾನು ಬೆಳಗ್ಗೆ ಎದ್ದು ಸ್ನಾನ ಮಾಡಿ ಮನೆ ದೇವರ ಮುಂದೆ ತುಪ್ಪದ ದೀಪ ಹಚ್ಚಿಟ್ಟು ಈ ಘಂಟಾಯಣದಿಂದ ನಮ್ಮನ್ನು ಪಾರು ಮಾಡಿದ್ರೆ ನಿನ್ನ ದೇವಸ್ಥಾನಕ್ಕೆ ದೊಡ್ಡ ಘಂಟೆ ಕಟ್ಟಿಸುವೆ ಎಂದು ಹರಕೆ ಹೊತ್ತೆ. ನಾನು ಬಿಸಿ ಕಾಫಿ ತರುವಷ್ಟರಲ್ಲಿಯೇ ಯಜಮಾನರು ಆದಾಗಲೇ ಎದ್ದು ಮುಖವನ್ನು ತೊಳೆಯದೇ ಹೊರಗೆ ಹೋಗಿ ಹತ್ತು ನಿಮಿಷಕ್ಕೇ ಒಳಗೆ ಬಂದರು. ಅವರ ಹಿಂದೇನೇ ಎಲೆಕ್ಟ್ರಿಷಿಯನ್ ಸಹ ಬಂದಿದ್ದನು. ಅವನು ನಮ್ಮ ಕಾಲಿಂಗ್ ಬೆಲ್ ಪರೀಕ್ಷೆ ಮಾಡುವಂತೆ ಮೇಲಿನಿಂದ ಕೆಳಕ್ಕೆ ತಿರುಗಿಸಿ ಹಿಡಿದು ತಾನು ತಂದಿದ್ದ ಶಸ್ತ್ರಾಸ್ತ್ರಗಳ ಪೆಟ್ಟಿಗೆಯಿಂದ ಒಂದು ಶಸ್ತ್ರ ತೆಗೆದು ಅದರಿಂದ ಬೆಲ್‌ನ ಕಿವಿಯನ್ನು ಬಲವಾಗಿ ಹಿಂಡಿ ಅದಕ್ಕೆ ಎರಡು ಸಲ ಏಟು ಕೊಟ್ಟನು. ತನ್ನ ಡಬ್ಬದಲ್ಲಿದ್ದ ಯಾವುದೋ ವಸ್ತುವನ್ನು ಅದಕ್ಕೆ ಅಳವಡಿಸಿದನು. ನಂತರ ನಾನು ಕೊಟ್ಟ ಕಾಫಿಯನ್ನು ಹೀರಿ ದಕ್ಷಿಣೆಯನ್ನು ತೆಗೆದುಕೊಂಡು ಹೊರಟುಹೋದನು. ಅಂದು ರಾತ್ರಿ ನಾನು ನನ್ನ ಯಜಮಾನರೂ ಸುಖವಾಗಿ ನಿದ್ದೆ ಮಾಡಿದೆವು.

ಆಗಿದ್ದು ಇಷ್ಟೆ ಮಧ್ಯಾಹ್ನ ನಾವಿಲ್ಲದೇ ಇರುವಾಗ ಬಂದಿದ್ದ ನೆಂಟರು ಮೂರ್‍ನಾಲ್ಕು ಬಾರಿ ಕಾಲಿಂಗ್ ಬೆಲ್ ಮಾಡಿದ್ದಾರೆ. ಅದು ಯಾವ ಶಬ್ದವನ್ನೂ ಮಾಡಿಲ್ಲ. ನಾವು ಬಾಗಿಲು

ತೆರೆಯದೇ ಇದ್ದಾಗ ಮತ್ತೆ ಅರ್ಧ ಗಂಟೆ ಬಿಟ್ಟು ಬಂದು ನಾವು ಬಂದಿದ್ದೇವೆಯೇ ಎಂದು ಪರೀಕ್ಷಿಸಲು ಮತ್ತೆ ಕಾಲಿಂಗ್ ಬೆಲ್ ಮಾಡಿದ್ದಾರೆ. ಹೀಗೆ ಅರ್ಧ ಗಂಟೆಗೊಂದು ಸಲ ಬಂದು ಕರೆಗಂಟೆ ಒತ್ತಿದ್ದಾರೆ. ಹಗಲು ಎರಡು ಗಂಟೆಗೆ ಮತ್ತೆ ಮೂರು ಗಂಟೆಗೆ ಮತ್ತೆ ಅರ್ಧ ಗಂಟೆ ಬಿಟ್ಟು ಒತ್ತಿದ ಗಂಟೆ ತುಂಬಾ ತಡವಾಗಿ ರಾತ್ರಿ ಎರಡು ಗಂಟೆಗೆ, ಮತ್ತೆ ಮೂರು ಗಂಟೆಗೆ ಮತ್ತೆ ಇನ್ನರ್ಧ ಗಂಟೆ ಬಿಟ್ಟು ಹೊಡೆದುಕೊಂಡಿದೆ.

ನಮ್ಮ ನೆಂಟರು ಬಾರಿಸಿದ ಹಗಲು ಗಂಟೆಗೆ ರಾತ್ರಿ ಎಫೆಕ್ಟ್ ಆಗಿ ರಾತ್ರಿ ಸದ್ದು ಮಾಡಿದೆ. ಬಹುಶಃ ನಮ್ಮ ಕಾಲಿಂಗ್ ಬೆಲ್ ರಾಜಕಾರಿಣಿಗಳ ವಂಶದ್ದಿರಬೇಕು. ಅವರೂ ಅಷ್ಟೆ. ಈಗಿನ ಚುನಾವಣೆಯಲ್ಲಿ ನಾವು ಹೇಳಿದ ಬೇಡಿಕೆಗಳನ್ನು ಮುಂದಿನ ಚುನಾವಣೆ ಬಂದಾಗ ಅರ್ಥೈಸಿಕೊಳ್ಳುತ್ತಾರೆ. ಆದರೆ ಅವು ಆಗ ಚಲಾವಣೆಯಲ್ಲಿ ಇರೋದಿಲ್ಲ.

✵

---

## ಮಾನ ಮತ್ತು ಮಗು

"ಅಪ್ಪ ಇವತ್ತು ನಮ್ಮ ಶಾಲಾ ವಾರ್ಷಿಕೋತ್ಸವದ ಅಂಗವಾಗಿ ನಡೆದ ಕನ್ನಡ ಚರ್ಚಾ ಸ್ಪರ್ಧೆಯಲ್ಲಿ ನನಗೆ ಪ್ರಥಮ ಬಹುಮಾನ ಸಿಕ್ತು"

"ಕಂಗ್ರಾಟ್ಸ್ ಮಗು. ಬಹುಮಾನ ಏನು ಕೊಟ್ರು?"

"ನಾಲ್ಕು ಕೋತಿಗಳು ವಿವಿಧ ಭಂಗಿಗಳಲ್ಲಿ ಸಾಲಾಗಿ ಕುಳಿತಿರುವ ವಿಗ್ರಹ. ಈ ಬಹುಮಾನವನ್ನು ಅಧ್ಯಕ್ಷತೆ ವಹಿಸಿದ್ದ ನಮ್ಮ ತಾಲ್ಲೂಕಿನ ಶಾಸಕರ ಕೈಯಲ್ಲಿ ಕೊಡಿಸಿದ್ರು."

"ಎಲ್ಲಿ ಬಹುಮಾನ?"

"ಕ್ಷಮಿಸಿ ಅಪ್ಪ. ಅದನ್ನು ಅವರಿಗೇ ವಾಪಸ್ ಕೊಟ್ಟೆ"

"ಯಾಕೆ?"

"ಬಹುಮಾನವನ್ನು ಕೊಡುತ್ತಾ ಆ ಶಾಸಕರು ಕೋತಿಗಳ ವಿವಿಧ ಭಂಗಿಗಳ ಸಂಕೇತವೇನು ಗೊತ್ತಾ ಮಗು? ಎಂದು ಕೇಳಿದರು. 'ಇಲ್ಲ' ಅಂದೆ."

"ಕಣ್ಣುಮುಚ್ಚಿ ಕುಳಿತಿರುವ ಕೋತಿ - ಕೆಟ್ಟದ್ದನ್ನು ನೋಡಬೇಡ ಎನ್ನುತ್ತದೆ. ಕಿವಿಮುಚ್ಚಿ ಕುಳಿತಿರುವ ಕೋತಿ - ಕೆಟ್ಟದ್ದನ್ನು ಕೇಳಬೇಡ ಎನ್ನುತ್ತದೆ. ಬಾಯಿಮುಚ್ಚಿ ಕುಳಿತಿರುವ ಕೋತಿ - ಕೆಟ್ಟದ್ದನ್ನು ಮಾತನಾಡಬೇಡ ಎಂದು ಉಪದೇಶಿಸುತ್ತದೆ ಹಾಗೂ ಕೈಕಟ್ಟಿ ಕುಳಿತಿರುವ ನಾಲ್ಕನೇ ಕೋತಿ - ಯಾವುದಕ್ಕೂ ಕೈಚಾಚಬೇಡ ಎಂದು ಎಚ್ಚರಿಕೆ ಕೊಡುತ್ತದೆ. ಈ ಬಹುಮಾನವನ್ನು ನೀನು ನಿಮ್ಮ ಮನೆಯ ಷೋಕೇಸಿನಲ್ಲಿ ಭದ್ರವಾಗಿ ಇಡು ಮಗು" ಎಂದರು.

"ಹಾಗಾದ್ರೆ ಈ ಬಹುಮಾನ ನನಗೆ ಖಂಡಿತ ಬ್ಯಾಡ. ಇದರ ಅವಶ್ಯಕತೆ ನಿಮಗೇ ಹೆಚ್ಚಾಗಿರುವುದರಿಂದ ನಿಮ್ಮ ಅಸೆಂಬ್ಲಿಯಲ್ಲೇ ಇಟ್ಟುಕೊಳ್ಳಿ ಎಂದು ಅದನ್ನು ಹಿಂದಿರುಗಿಸಿಬಿಟ್ಟೆ."

"ಭೇಷ್. ಬಹುಮಾನಕ್ಕಿಂತ ನಮ್ಮಂಥವರಿಗೆ ಮಾನ ಮುಖ್ಯ."

- ಎಚ್‌ಎಸ್ಬಿ

# ಸೂಪರ್ ಮ್ಯಾನ್.....

**- ಎಚ್. ಗೋಪಾಲಕೃಷ್ಣ**

**ನ**ಮ್ಮ ಜತೆ ಕೆಲಸ ಮಾಡುವ ನನ್ನ ಸಹೋದ್ಯೋಗಿಯೊಬ್ಬರು ಕಳೆದ ವಾರ ನನಗೆ ಒಂದು ಪ್ರಸಂಗವನ್ನು ತಿಳಿಸಿದರು.....

ನಮ್ಮ ಆಫೀಸ್ ಬಾಯ್ ನಿಮಗೆ ಗೊತ್ತಲ್ಲಾ, ಅದೇ ನೀವು ಬಂದಾಗ ನಿಮಗೆ ಕಾಫಿ ಗೀಫಿ ತಂದುಕೊಡ್ತಾನೆ ನೋಡಿ...

ಅವನ ಮಗ ಕಳೆದ ವರ್ಷ ಎಸ್ಸೆಲ್ಸೀನಲ್ಲಿ ಎಪ್ಪತ್ತೊಂರು ಪರ್ಸೆಂಟು ತಗೊಂಡು ಪಾಸ್ ಮಾಡಿದ. ಮಗನ್ನ ಒಂದು ಕೆಲಸಕ್ಕೆ ಅಂತ ಹಾಕಿ ತನಗೆ ಆರ್ಥಿಕವಾಗಿ ನೆರವು ದೊರಕುವ ಹಾಗೆ ಮಾಡಿಕೋಬೇಕು ಅಂತ ಇವನ ಆಸೆ. ಇವನಿಗೆ ಗೊತ್ತಲ್ಲಾ? ಇಪ್ಪತ್ತು ವರ್ಷ ಸರ್ವೀಸಾದರೂ ಬರೋದು ಐದೋ ಆರು ಸಾವಿರ, ಮೈಯೆಲ್ಲಾ ಸಾಲ ಜೊತೆಗೆ ಆರೋಗ್ಯದ ಸಮಸ್ಯೆ. ಹೀಗೆ ನೂರೆಂಟು ತಾಪತ್ರಯ. ಎಸ್ಸೆಲ್ಸಿ ಆಗಿರೋ ಹುಡುಗನಿಗೆ ಅದೆಂತಾ ಕೆಲಸ ಸಿಕ್ಕೀತು? ಮಗ ಅಪ್ಪನಿಗೆ ಹೇಳಿದ - ಅಪ್ಪಾ ಇನ್ನು ಮೂರು ವರ್ಷ ಹೇಗಾದರೂ ಓದಿಸಿಬಿಡು, ಡಿಪ್ಲೊಮಾ ಸೇರ್ಕ್ಕೋತೀನಿ. ಆಮೇಲೆ ನಿನ್ನ ಜತೆಗೆ ನನ್ನ ಸಂಬಳಾನೂ ಸೇರಿಸಿಕೊಂಡು ಸಂಸಾರ ತೂಗಿಸೋಣಾ... ನಿನಗೆ ಏನೂ ಹೊರೆಯಾಗಬಾರದು ಹಾಗೆ....

ಅಪ್ಪನಿಗೂ ಇದು ಸರಿಯಾದ ಯೋಚನೆ ಅನಿಸಿತು. ಇಬ್ಬರೂ

ಪಾಲಿಟೆಕ್ನಿಕ್ಕುಗಳಿಗೆ ಅಲೆದರು. ಮನೆಯಿಂದ ಸ್ವಲ್ಪ ದೂರದಲ್ಲಿ ಒಂದು ಪಾಲಿಟೆಕ್ನಿಕ್‌ನಲ್ಲಿ ಸೀಟೂ ಸಿಗುವ ಹಾಗೆ ತೋರಿತು. ಅಪ್ಪ ಮಗ ಇಬ್ಬರೂ ಹೋಗಿ ಅಲ್ಲಿನ ಮುಖ್ಯಸ್ಥರನ್ನು ಕಂಡರು. ಸೀಟಿಗೆ ತಮ್ಮ ಬೇಡಿಕೆ ಮಂಡಿಸಿದರು.

ಎಲೆಕ್ಟ್ರಾನಿಕ್ಸ್ ಸೀಟು ಬೇಕಾ? ಅದಕ್ಕೆ ಸಿಕ್ಕಾಪಟ್ಟೆ ಡಿಮ್ಯಾಂಡಿದೆಯಲ್ಲಪ್ಪಾ? ಸಿವಿಲ್ ತಗೋ - ಅಂದರಂತೆ.

ಅಪ್ಪ ಅವನ ಕಷ್ಟವನ್ನು ಮತ್ತೆಮತ್ತೆ ಹೇಳಿಕೊಂಡ. ಹೇಗಾದರೂ ಮಾಡಿ ಸೀಟು ಕೊಡಿ ಸಾರ್ ಅಂತ ಬೇಡಿಕೊಂಡ.

ಹುಡುಗ ಮಾರ್ಕ್ಸ್ ತಗೊಂಡಿರೋದು ಸಾಲದು, ಇನ್ನ ಸ್ವಲ್ಪ ಜಾಸ್ತಿ ತಗೊಂಡಿದ್ದರೆ ಅದು ಹೇಗಾದರೂ ಮಾಡಬಹುದಿತ್ತು. ಒಂದು ಕೆಲಸ ಮಾಡು ಪೇಮೆಂಟ್ ಸೀಟು ಕೊಡ್ತೀನಿ. ದುಡ್ಡು ತಂದು ಕಟ್ಟುಬಿಡು... ಅಂದರು.

ಸೀಟು ಸಿಗುವ ಭರವಸೆ ಸಿಕ್ತಲ್ಲಾ ಅಂತ ಅಪ್ಪನಿಗೆ ಖುಷಿಯಾಯಿತು. ಪೇಮೆಂಟ್ ಸೀಟಿಗೆ ತಲೆಯಾಡಿಸಿದ. ಒಂದು ಲಕ್ಷ ಇಪ್ಪತ್ತು ಸಾವಿರವಂತೆ ಪೇಮೆಂಟ್ ಸೀಟು - ಅದು

ಮಾರುಕಟ್ಟೆಯಲ್ಲಿ ಎರಡು ಲಕ್ಷವಿದೆಯಂತೆ – ಇವನಿಗೋಸ್ಕರ ಅದನ್ನ ಒನ್ ಪಾಯಿಂಟ್ ಟೂಗೆ ಕೊಟ್ಟಿದ್ದಾರಂತೆ...

ಸಹೋದ್ಯೋಗಿ ಮುಂದುವರೆಸಿದ್ದರು.

ಸೇರಿಸಿದನಾ ಮಗನ್ನ?

ಅಂತ ಕೇಳಿದೆ.

ಇನ್ನೂ ಇಲ್ಲಾ ಸಾರ್ ಅದಕ್ಕೇ ಬರ್ತಿದ್ದೇನೆ. ಇನ್ನೂ ಕಮ್ಮೀಗೆ ಕೇಳಿಕೊಳ್ಳೋದಕ್ಕಿಲ್ಲವಾ ಅಂತ ಕೇಳಿದೆ. ಅವರು ಇದಕ್ಕಿಂತಲೂ ಕಡಿಮೆಯಾದರೆ ಆಗುಲ್ಲ. ಎರಡು ದಿವಸದಲ್ಲಿ ದುಡ್ಡು ತಂದು ಕಟ್ಟಿಬಿಟ್ಟು ಸೇರಿಸು, ಇಲ್ಲ ಅಂದರೆ ಸೀಟು ಬೇರೆಯವರಿಗೆ ಹೋಗುತ್ತೆ ಅಂದರಂತೆ.

ಪಾಪ ಇವನಿಗೆ ಬರೋ ಸಂಬಳದಲ್ಲಿ ಅಷ್ಟು ಹೇಗೆ ಕೂಡಿಸೋಕ್ಕೆ ಸಾಧ್ಯ? ಮನೇಲಿ ಇದ್ದ ಬದ್ದ ಒಡವೆ ಪಡವೆ ಮಾರಿ ಹಾಗೂ ಹೀಗೂ ಅರವತ್ತು ಸಾವಿರ ಸೇರಿಸಿದನಂತೆ. ಮಿಕ್ಕಿದ್ದ ದುಡ್ಡನ್ನ ನಮ್ಮ ಹತ್ತಿರ – ಅಂದರೆ ಅವನು ಇಲ್ಲೇ ತಾನೇ ಕೆಲಸ ಮಾಡ್ತಿರೋದು – ಕೇಳುಕ್ಕೆ ಒಂದು ಅರ್ಜಿ ಹಿಡಕೊಂಡು ಬಂದ. ಪಾಪ ಅವನ ಕಷ್ಟ ಕಂಡು ನನಗೂ ಬೇಸರ. ನಮ್ಮ ರೂಲ್ಸಿನಲ್ಲಿ ಈರೀತಿ ಸಾಲ ಕೊಡೋದಿಕ್ಕೆ ಅವಕಾಶ ಇಲ್ಲ ಅಂತ ಹೇಳಿದೆ. ನೋಬಲು ಕಾಸು ಸಾರ್ ನೀವೇ ಮ್ಯಾನೇಜ್‌ಮೆಂಟಿನ ಹತ್ತಿರ ಮಾತನಾಡಿ ಅಂತ ಗೋಗರೆದ. ಸರಿ ಅಂತ ಅವನ ಕೈಲಿ ಒಂದು ಅರ್ಜಿ ಬರೆಸಿಕೊಂಡು ಒಂದು ಫೈಲು ರೆಡಿ ಮಾಡಿದೆ. ಸಂಬಂಧಿಸಿದವರ ಹತ್ತಿರ ಸುಮಾರು ಸಲ ಮಾತೂ ಆಡಿದೆ. ಈ ರೀತಿ ಸಾಲ ಕೊಡುವ ಕಾನೂನು ನಮ್ಮ ಹತ್ತಿರ ಇಲ್ಲ ಕಾನೂನು ಬಿಟ್ಟು ನಾವು ಕೆಲಸಮಾಡುವ ಹಾಗಿಲ್ಲ ಎನ್ನುವ ಸಬೂಬು ಬಂತು. ಯಾರಿಗಾದರೂ ನೆರವು ಕೊಡಬೇಕು ಅನ್ನುವ ಹಾಗಿದ್ದರೆ ಕಾನೂನನ್ನ ಬದಲಾಯಿಸಲು ಆಗುಲ್ಲವೇ ಅಂತಲೂ ಕೆಲವರನ್ನು ನಾನು ಕೇಳಿದೆ. ನನ್ನ ಕಾಳಜಿ ನೋಡಿದವರೊಬ್ಬರು ನಿಮ್ಮ ಕೆಲಸದವನನ್ನ ನನ್ನ ಹತ್ತಿರ ಕಳಿಸು ಒಂದು ಉಪಾಯ ಮಾಡೋಣ ಅಂದರು. ಸರಿ ಅಂತ ಅವರ ಹತ್ತಿರ ಕಳಿಸಿದೆ. ಅವರು ಇವನ ಕಥೆ ಕೇಳಿ ಒಂದು ಸಲಹೆ ಕೊಟ್ಟರಂತೆ.

ಏನು ಅದು? ಅಂದೆ.

ಕೆಲವರ ಹತ್ತಿರ ಹಣವನ್ನು ಪೂಲ್ ಮಾಡಿ ಇವನಿಗೆ ಕೊಡೋದು, ಇವನು ಅದರಲ್ಲಿ ಡೊನೇಷನ್ ಕಟ್ಟೋದು.... ಹೀಗೆ.

ಒಳ್ಳೇ ಐಡಿಯಾನೇ...

ಒಳ್ಳೆ ಐಡಿಯಾನೇ, ನನ್ನ ಅಸಿಸ್ಟೆಂಟು ಒಪ್ಪಲಿಲ್ಲ ಇದಕ್ಕೆ...

ಯಾಕಂತ್ರೀ ಅಂತ ಕೇಳಿದೆ, ಆಶ್ಚರ್ಯವಾಗಿತ್ತು.

ಅಲ್ಲಾ ಸಾರ್ ಹುಡುಗ ಓದು ಮುಗಿಸಿ ಕೈಗೆ ಹಣ ಬರುವ ಹಾಗಾದ ಮೇಲೆ ನನ್ನ ಬಗ್ಗೆ ಅವನೇನು ಅಂದುಕೊಳ್ತಾನೆ? ಕೈನಲ್ಲಿ ದುಡ್ಡು ಹೊಂದಿಸೋಕ್ಕೆ ಆಗದೇ ದಾನ ಇಸ್ಕೊಂಡು ಓದಿಸಿದ ನಮ್ಮಪ್ಪ ಅಂತ ಅನ್ನುಲ್ವಾ ಅವನು? ಅಂತ ಇವನ ತರ್ಕ. ಅಪ್ಪನ ಬಗ್ಗೆ

ಅಪಾರವಾದ ಗೌರವವನ್ನು ಮಕ್ಕಳು ಇಟ್ಟುಕೊಂಡಿರುತ್ತವೆ. ಅಪ್ಪನ ಕೈಲಿ ಅಸಾಧ್ಯವಾದದ್ದು ಯಾವುದೂ ಇಲ್ಲ ಅಂತ ನಂಬಿರುತ್ತವೆ. ಅವರ ಲೆಕ್ಕದಲ್ಲಿ ಅಪ್ಪ ಒಬ್ಬ ಸೂಪರ್ ಮ್ಯಾನು... ಅವನು ದಾನ ಇಸ್ಕೊಂಡ ಅಂತ ಗೊತ್ತಾದರೆ ಆದೇನು ಗೌರವ ಇರುತ್ತೆ? ಇದು ಅವನ ವೇ ಆಫ್ ಥಿಂಕಿಂಗ್......

ಕೊನೇಗೆ ಏನಾಯಿತು?

ಆಗೋದೇನು? ಸಾಲ ಮಾಡಿದ ಹತ್ತು ಪರ್ಸೆಂಟಿನ ಹಾಗೆ. ಪಾಲಿಟೆಕ್ನಿಕ್ಕಿಗೆ ಸೇರಿಸಿದ. ಮಗನೂ ಹುಷಾರು ಚೆನ್ನಾಗೇ ಓದ್ತಾ ಇದಾನೆ.... ಅಪ್ಪ ಅಂದರೆ ಅವನಿಗೆ ಅದೇನೋ ಮೆಚ್ಚುಗೆ, ಅಪ್ಪ ಹೀರೋ ಅನ್ನೋ ಹಾಗೆ ಆಡ್ತಾನೆ....

ಅಪ್ಪ ಅಂದರೆ ಸೂಪರ್ ಮ್ಯಾನು ಅಲ್ಲವೇ? ಅಂದೆ.

✵

---




## ಮಳೆಗಾಲ

ಬೆಚ್ಚನೆಯ ಸ್ವೆಟರುಗಳು, ಶಾಲುಗಳು ಹೊರಬರುವ ಕಾಲ
ಹಪ್ಪಳ ಸಂಡಿಗೆ ಕರಿದು ಮುಕ್ಕುವ ಕಾಲ
ಛತ್ರಿ ರೈನ್ ಕೋಟು ಉಪಯೋಗಿಸುವ ಕಾಲ
ಚಕ್ಕುಲಿ ಕೋಡಬಳೆ ಜೊತೆಗೆ
ಬಿಸಿ ಬಿಸಿ ಕಾಫಿ ಗುಟುಕರಿಸುವ ಕಾಲ
ರಗ್ಗುಗಳ ಸಂದಿ ಸೇರಿ ಸುಖನಿದ್ದೆಗೆ ಜಾರುವ ಕಾಲ
ರಾಗಿ ಮುದ್ದೆಯ ಜೊತೆ ಸೊಪ್ಪಿನ ಸಾರನು ಮೆಲ್ಲುವ ಕಾಲ
ಸ್ವೆಟರು, ಶಾಲು, ಹಪ್ಪಳ, ಸಂಡಿಗೆ, ಛತ್ರಿ,
ರೈನ್ ಕೋಟು, ಚಕ್ಕುಲಿ, ಕೋಡಬಳೆ, ರಗ್ಗು,
ರಾಗಿ ಮುದ್ದೆ, ಸೊಪ್ಪಿನ ಸಾರು ಎಲ್ಲ ಇದೆ
ಆದರೆ ಎಲ್ಲಿ ಎಲ್ಲಿ ಎಲ್ಲಿ
ಮಳೆಗಾಲ ಎಲ್ಲಿ

*– ಸುಕೇಶವ*

# ನಾನು ಹಾಸಿಗೆ ಹಿಡಿದಿದ್ದಾಗ

**- ಡಾ. ಡಿ.ವಿ. ಗುರುಪ್ರಸಾದ್**

**''ಟ್ರಿನ್...** ಟ್ರಿನ್... ಟ್ರಿನ್''

''ಹಲೋ''

''ಸರ್ ನಮಸ್ಕಾರ, ನಾನು ರಾಮು ಮಾತಾಡೋದು. ಏನ್ ಸಾರ್, ಆಕ್ಸಿಡೆಂಟ್ ಆಯಿತಂತೆ?''

''ಹೌದು ಕಣಪ್ಪ''

''ನಿಮಗೆ ಏನು ಆಗಿಲ್ಲವಂತಲ್ಲ ಸಾರ್''

''ಯಾರು ಹೇಳಿದ್ರಪ್ಪ''

''ನಾನು ಟಿ.ವಿ.ಯಲ್ಲಿ ನೋಡಿದೆ. ನೀವು ಆರಾಮವಾಗಿ ದೇವೇಗೌಡ್ರ ಥರ ಹೆಗಲ ಮೇಲೆ ಟವಲ್ ಹಾಕಿಕೊಂಡು ಕಾರಿನಿಂದ ಇಳಿದು ಆಸ್ಪತ್ರೆಯ ಒಳಗೆ ಹೋಗುತ್ತಿದ್ದಿರಿ. ಪಾಪ ನಮ್ಮ ಭಾಭಿ ವೀಲ್ ಚೇರ್‌ನಲ್ಲಿ ಕುಳಿತುಕೊಂಡು ಒಳಗೆ ಹೋದರು. ಅವರಿಗೇ ಜಾಸ್ತಿ ಗಾಯ ಆಯಿತಂತೆ. ನಿಮಗೆ ತರಚಿದ ಗಾಯ ಮಾತ್ರ ಅಂದ್ರಲ್ಲಾ?''

''ಇಲ್ಲ ಕಣಪ್ಪ, ನನಗೇ ಜಾಸ್ತಿ ಗಾಯ ಆಗಿರೋದು''

''ಹೇಗೆ ಸರ್ ನಂಬೋದು. ಟಿ.ವಿ. ಸುಳ್ಳು ಹೇಳುತ್ತಾ?''

''ಇಲ್ಲ ಕಣಪ್ಪ, ಟಿ.ವಿ.ನೂ ಸುಳ್ಳು ಹೇಳಲ್ಲ. ನಾನೂ ಸುಳ್ಳು ಹೇಳುತ್ತಿಲ್ಲ. ನಾನು ಆಸ್ಪತ್ರೆಗೆ ಹೋದ ಮೇಲೇಯೇ ನನಗೆ ಎಷ್ಟು ಕಡೆ ಫ್ರಾಕ್ಚರ್ ಆಗಿದೆಯೆಂದು ಗೊತ್ತಾಗಿದ್ದು. ನಾನು ಒಂದು ಸಲ ಒಳಗಡೆ ಹೋದ ನಂತರ ಟಿ.ವಿ. ಕ್ಯಾಮೆರಾ ನನ್ನನ್ನು ಮರೆತೇ ಬಿಟ್ಟಿತಪ್ಪ''

''ಓ ಹೌದಾ ಸಾರ್. ಬೇಗ ರಿಪೇರಿ ಮಾಡಿಸಿಕೊಂಡು ಬಿಡಿ ಸರ್, ಬೈ''

★★★★★

''ಹಲೋ ಸರ್''

''ಓಹೋ ಏನಪ್ಪ ಲಕ್ಷ್ಮಣ, ಚೆನ್ನಾಗಿದ್ದೀಯಾ?''

''ನಾನು ಚೆನ್ನಾಗಿದ್ದೀನಿ ಸರ್, ನೀವು?''

''ಚೆನ್ನಾಗಿಲ್ಲ ಕಣಪ್ಪ''

''ಏಕೆ ಸರ್ ನನ್ನ ಮೇಲೆ ಕೋಪನಾ?''

''ಇಲ್ಲ ಕಣಯ್ಯಾ ನಿನ್ನ ಮೇಲೆ ಯಾಕೆ ನನಗೆ ಕೋಪ, ಸುಮ್ಮಸುಮ್ಮನೇ''

''ಮತ್ತೆ ಯಾಕೆ ಸರ್ ರಾಂಗ್ ಆಗಿ ಮಾತಾಡ್ತೀರ, ಚೆನ್ನಾಗಿದ್ದೀರಾ ಅಂತ ಕೇಳಿದರೆ ಚೆನ್ನಾಗಿಲ್ಲ ಅಂತಿರಾ?''

‘‘ಲಕ್ಷ್ಮಣಾ, ನಾನು ನಿಜವಾಗಲೂ ಚೆನ್ನಾಗಿಲ್ಲ, ಹಾಸಿಗೆ ಹಿಡಿದು ಮಲಗಿಕೊಂಡಿದ್ದೇನೆ’’

‘‘ಟೈಫಾಯಿಡಾ ಸರ್?’’

‘‘ಟೈಫಾಯಿಡೂ ಅಲ್ಲ, ಕಾಲರಾನೂ ಅಲ್ಲ, ಮೂಳೆ ಮುರಿದುಕೊಂಡು ಬೆಡ್‌ರೆಸ್ಟ್‌ನಲ್ಲಿದೀನಿ’’

‘‘ಓ ಹೌದಾ, ಸಾರಿ ಸರ್. ಎಲ್ಲಿ ಆಕ್ಸಿಡೆಂಟ್ ಆಯಿತು ಸರ್?’’

‘‘ಧರ್ಮಸ್ಥಳದ ಹತ್ತಿರ’’

‘‘ಅಯ್ಯೋ ತುಂಬಾ ವೆರಿ ಸಾರಿ ಸರ್. ಇನ್ನೂ ಎಷ್ಟು ದಿನ ಹಾಸಿಗೇಲೇ ಇರಬೇಕು?’’

‘‘ಒಂದು ತಿಂಗಳಾಗಬಹುದು’’

‘‘ಹೇಗೆ ಸಿ.ಎಂ.ಗಳು ಕುರ್ಚಿಗೆ ಅಂಟಿಕೊಳ್ತಾರೋ ಹಾಗೇ ನೀವೂ ಹಾಸಿಗೇಗೇ ಫೆವಿಕಾಲ್ ಹಾಕಿಕೊಂಡಿರಬೇಕಾಗಿ ಬಂತಲ್ಲಾ ಸಾರ್. ಪಾಪ ಅತ್ತಿಗೆಗೆ ಭಾಳಾ ತೊಂದರೆ ಆಗ್ತಿರಬೇಕು, ನೀವು 10 ಗಂಟೆ ಮನೆಲಿದ್ರೇನೇ ಪ್ರಾಬ್ಲಂ, ಇನ್ನು ಇಪ್ಪತ್ತನಾಲ್ಕು ಗಂಟೆ ಮನೇಲಿದ್ರೆ, ಏನೇನು ಅನಾಹುತ ಆಗುತ್ತೋ ಏನೋ. ಅತ್ತಿಗೆ ನಿಮ್ಮನ್ನು ಬಿಟ್ಟು ಹೋಗಲ್ಲ ಅಂದುಕೊಂಡಿದ್ದೀನಿ.’’

‘‘ಹ ಹ ಹಾ, ಅವಳಿಗೂ ಗಾಯ ಆಗಿ ಅವಳೂ ಪಕ್ಕದ ಮಂಚದಲ್ಲೇ ಮಲಗಿದ್ದಾಳೆ ಕಣಯ್ಯ...... ಬೈ’’

★★★★★

‘‘ಹಲೋ’’

‘‘ಎಸ್ ಪ್ಲೀಸ್’’

‘‘ಸಾರ್ ನಾನು ಬೆಳ್ಳಿ ಕರ್ನಾಟಕದ ರಿಪೋರ್ಟರ್ ರಂಗಪ್ಪ’’

‘‘ಹ್ಞ ಹ್ಞ ಏನು ಫೋನ್ ಮಾಡಿದ್ದು?’’

‘‘ಪಾಪ, ರಿಟೈರ್ ಆಗೋ ಟೈಮ್‌ಗೆ ಆಕ್ಸಿಡೆಂಟ್ ಆಯ್ತಲ್ಲಾ ಸಾರ್, ನಾವು ನಮ್ಮ ಪತ್ರಿಕೇಲಿ ಫೋಟೋ ಸಹಿತ ವರದಿ ಮಾಡಿದ್ವಿ, ನೋಡಿದ್ರಾ ಸರ್’’

‘‘ನೋಡಿದೆ, ಈಗೇನಾಗ್ಬೇಕು?’’

‘‘ಏನಿಲ್ಲ ಸಾರ್, ಬೆಳಿಗ್ಗೆ ಒಂದು ಪ್ರೆಸ್ ಕಾನ್ಫರೆನ್ಸ್‌ಗೆ ಹೋಗಿದ್ದೆ. ಆಲದಮರದ ಆಶ್ರಮದ ಸದಾಸಂತೋಷ ಸ್ವಾಮಿಗಳು ಕರೆದಿದ್ರು’’

‘‘ಓ ಹೌದಾ, ಏನಂತ ಹೇಳಿದ್ರು?’’

‘‘ಏನಿಲ್ಲ ಸಾರ್, ಅವರನ್ನ ನೀವೇ ಅಂತೆ ಅರೆಸ್ಟ್ ಮಾಡಿಸಿದ್ದು’’

‘‘ಹೌದಪ್ಪಾ, ಇಲ್ಲಿಂದ ಸಾವಿರಾರು ಮೈಲಿ ದೂರದಲ್ಲಿ ಅಡಗಿಕೊಂಡಿದ್ದ ಜಾಗದಿಂದ ಹುಡುಕಿ ತರಿಸಿದ್ದೆ. ನಾವು ಹೊಸದಾಗಿ ಓಪನ್ ಮಾಡಿದ್ದ ಲಾಕಪ್ ಅವರಿಂದಲೇ ಉದ್ಘಾಟನೆ ಆಗಿತ್ತಲ್ವೇ, ನೀವೆಲ್ಲಾ ರಿಪೋರ್ಟ್ ಮಾಡಿದ್ರಲ್ಲಾ’’

''ಸಾರ್ ಸ್ವಾಮಿಜಿ ಹೇಳಿದ್ರು, ನಿಮಗೆ ಆಕ್ಸಿಡೆಂಟ್ ಆಗಿದ್ದು ಅವರು ಕೊಟ್ಟ ಶಾಪದಿಂದಲೇ ಅಂತೆ''

''ನೋಡಿ ರಂಗಪ್ಪ, ಅವರು ಲಾಕಪ್‌ಗೆ ಹೋಗಿದ್ದು ಯಾರ ಶಾಪದಿಂದ ಅಂತ ಕೇಳಿದ್ರಾ?''

''ಇಲ್ಲಾ ಸಾರ್, ಸ್ವಾಮೀಜಿ ಸ್ಟೇಟ್ಮೆಂಟ್‌ಗೆ ನಿಮ್ಮದೊಂದು ರಿಯಾಕ್ಷನ್ ತಗೋ ಎಂದು ಸಂಪಾದಕರು ಹೇಳಿದ್ರು. ಅದಕ್ಕೇ ಫೋನ್ ಮಾಡಿದೆ.''

''ನನ್ನದೇನೂ ಪ್ರತಿಕ್ರಿಯೆ ಇಲ್ಲ ರಂಗಪ್ಪ''

''ಗೆಟ್ ವೆಲ್ ಸೂನ್ ಸರ್, ಬೈ''

★★★★★

''ಸರ್ ನಾನು ಪಾಟೀಲ್ ಮಾತಾಡೋದು''

''ಏನ್ ಪಾಟೀಲ್ ಯಾತಕ್ಕೆ ಫೋನ್ ಮಾಡಿದೆ?''

''ಸರ್ ನಿಮ್ಮ ಮೂಳೆಗಳು ಹಪ್ಪಳದ ಥರಾ ಪುಡಿ ಆಗಿ ಹೋಗಿವೆಯಂತೆ, ಹೌದಾ ಸರ್?''

''ಮೂಳೆ ಎಲ್ಲಾ ಆಗಿಲ್ಲ ಕಣಯ್ಯ, ಒಂದು ದೊಡ್ಡ ಮೂಳೆ ಆರು ಪೀಸ್ ಆಗಿದೆ''

''ಹೌದಾ ಸರ್ ನಿಮಗೂ ತಿಳಿ ಸಾರು, ಹಪ್ಪಳ ಇಷ್ಟ ಅದಕ್ಕೇ ಹಾಗಾಯ್ತು''

''ಏನು ಪೊಲಿಷ್ ಆಗಿ ಮಾತಾಡ್ತೀಯಪ್ಪ''

''ನಾನೇನಾದರೂ ಹೆಲ್ಪ್ ಮಾಡಬೇಕಾ ಸರ್?''

''ನೀನು ಏನು ಮೂಳೆ ಸೆಟ್ ಮಾಡ್ತೀಯೇನಯ್ಯ?''

''ನಾನು ಸೆಟ್ ಮಾಡೋಲ್ಲ ಸರ್ ಆದರೆ ಸೆಟ್ ಮಾಡೋ ಪುತ್ತೂರು ಡಾಕ್ಟರ್ ನನ್ನ ಫ್ರೆಂಡು''

''ಬೇಡಪ್ಪಾ, ನಿನ್ನ ಡಾಕ್ಟರ್ ನೀನೇ ಇಟ್ಕೋ. ನನ್ನ ತಂಟೆಗೆ ಬರಬೇಡಾ''

''ಯಾಕೆ ಸರ್, ಇದೆಂತ ಉಲ್ಟ ಮಾತಾಡ್ತೀರಾ. ಅಯ್ಯೋ ಪಾಪ ಅಂತ ಫೋನ್ ಮಾಡಿದರೆ ನನಗೇ ರೋಪ್ ಹಾಕ್ತಿರಾ. ಎಷ್ಟಾದರೂ ಪೊಲೀಸ್ ಆಫೀಸರ್ರು, ರಿಟೈರ್ ಆಗೋ ಟೈಂ ಬಂದ್ರೂ ರೋಪ್ ಹಾಕೋದು ಬಿಡಲಿಲ್ಲ, ನಿಮಗೆ ನಾನು ಫೋನ್ ಮಾಡಿದ್ದೇ ತಪ್ಪು – ಬೈ''

★★★★★

''ಹಲೋ ಸರ್''

''ಯಾರಪ್ಪ''

''ನಾನು ಎಸ್.ಐ. ಕಾಳಪ್ಪ ಸರ್''

''ಎನ್ ಸಮಾಚಾರ ಕಾಳಪ್ಪ''

''ಏನೂ ಇಲ್ಲ ನಿಮ್ಮ ಮೆಡಿಕಲ್ ರಿಪೋರ್ಟ್ ಬೇಕಲ್ಲಾ ಸರ್''

''ನನ್ನ ಮೆಡಿಕಲ್ ರಿಪೋರ್ಟ್ ನನ್ನ ಕೈಯಲ್ಲಿ ಇಲ್ಲವಲ್ಲ. ಆಸ್ಪತ್ರೆಯಲ್ಲಿ ಇದೆಯಪ್ಪ''

''ಇಲ್ಲ ಸರ್ ನೀವೇ ತೆಗೆದುಕೊಂಡು ಹೋದಿರಿ ಅಂತ RMO ಹೇಳಿದ್ರು''

''ಅಂದ ಹಾಗೆ ಯಾರಿಗೆ ಬೇಕು ರಿಪೋರ್ಟ್''

''ಆಕ್ಸಿಡೆಂಟ್ ಕೇಸ್ ಮಾಡಿದ್ದೇನೆ ಸರ್, ನೀವು ಇಲ್ಲಿಗೆ ಬಂದು ನನಗೆ ಸ್ಟೇಟ್‌ಮೆಂಟ್ ಕೊಡಬೇಕು''

''ಕಾಳಪ್ಪ ನಾನು ಹಾಸಿಗೆ ಬಿಟ್ಟು ಏಳಬಾರದು ಅಂತ ನಿನಗೆ ಗೊತ್ತಿಲ್ಲವೇನಯ್ಯ?''

''ಗೊತ್ತು ಸರ್ ಆದರೂ ಏನಾದರೂ ಸ್ಟೇಟ್‌ಮೆಂಟ್ ಕೊಡುತ್ತಿರೋ ಅಂತ ಅಷ್ಟೆ''

''ಅಂಬುಲೆನ್ಸ್ ಕಳಿಸಪ್ಪ ಸ್ಟೇಷನ್‌ಗೆ ಬರುತ್ತೇನೆ''

''ಸರ್ ಯಾಕೆ ವ್ಯಂಗ್ಯವಾಗಿ ಮಾತಾಡ್ತೀರಿ''

''ಅಲ್ಲ ಕಣಯ್ಯ ಕಾನೂನು ಪ್ರಕಾರ ನೀನು ನನ್ನ ಹತ್ರ ಬಂದು ಸ್ಟೇಟ್‌ಮೆಂಟ್ ತಗೋಬೇಕು, ನನಗೇ ಬಾ ಅಂತ ಕರೀತಿಯಲ್ಲಯ್ಯ. ನಿಮ್ಮ ಇಲಾಖೆಯಲ್ಲಿ ಇಷ್ಟು ವರ್ಷ ಸರ್ವೀಸ್ ಮಾಡಿದ್ದಕ್ಕೆ ಇದೇನಾ ಸಿಗೋ ಫಲ''

''ಸರ್ ಸರ್ ನೀವೇ ನಂಗೆ ಎಸ್.ಐ. ಅಂತ ರಿಕ್ರೂಟ್ ಮಾಡಿದ್ದು, ನಾನು ನಿಮ್ಮ ಶಿಷ್ಯ ಸರ್''

''ಶಿಷ್ಯ ಆದರೆ ಮನೆಗೆ ಬಂದು ಸ್ಟೇಟ್‌ಮೆಂಟ್ ಮಾಡಬೇಕಾ ಇಲ್ಲ ನನಗೇ ಬಾ ಅಂತ ಕರೀಬೇಕಾ?''

''ಸಾರಿ ಸರ್ ಗೊತ್ತಾಗ್ಲಿಲ್ಲ. ತಪ್ಪಾಯಿತು ಬಿಡಿ, ನಿಮ್ಮ ಪರವಾಗಿ ಸ್ಟೇಟ್‌ಮೆಂಟ್ ಬರೆದುಕೊಂಡು ಕೇಸ್ ಮುಗಿಸಿ ಬಿಡ್ತೀನಿ''

''ಸರಿಯಾಗಿ ಸ್ಟೇಟ್‌ಮೆಂಟ್ ಮಾಡ್ಕೋ, ಎಲ್ಲರಿಗೂ ಮಾಡೋಥರಾ ಮಾಡಬೇಡಾ''

''ಸರ್ ನೀವು ನಮ್ಮ ಗುರುಗಳು. ನಾನು ಸರಿಯಾಗಿ ಸ್ಟೇಟ್‌ಮೆಂಟ್ ಮಾಡ್ತೀನಿ, ಕೋರ್ಟ್‌ಗೆ ಬಂದು ಒಪ್ಪಿಕೊಂಡು ಬಿಡಿ''

''ಆಗಲಿ ಬಿಡಪ್ಪ''

''ಎಷ್ಟು ಆಕ್ಟಿವ್ ಆಗಿ ಇದ್ದವ್ರು ಸಾರ್ ನೀವು, ದಿನಾಗಲೂ 10 ಕಿ.ಮೀ. ಬ್ರಿಸ್ಕ್ ವಾಕ್ ಮಾಡೋದನ್ನ ನಾನು ನೋಡಿಲ್ವಾ – ಹಾಸಿಗೆ ಹಿಡಿದು ನಿಮಗೆ ತುಂಬಾ ಬೇಜಾರಾಗಿದೆ ಸಾರ್, ಫೋನ್ ಮಾಡ್ದೋರಿಗೆಲ್ಲ ರಾಂಗಾಗಿ ಮಾತಾಡ ಬೇಡಿ ಸಾರ್; ನೀವೇ ನಮಗೆ ಹೇಳಿರ್ಲಿಲ್ವಾ, ಹಸಿದ ಹುಲಿ, ಗಾಯಗೊಂಡ ಮನುಷ್ಯರಿಬ್ಬರಿಗೂ ಸರಿಸಮಾನವಾದ ಕೋಪ ಅಂತಾ; ಕೋಪ ಬೇಡಾ, ಶಾಂತರಾಗಿ. ಬೈ.... ಬೈ''

ನಾನು ಗಟ್ಟಿಯಾಗಿ ಹಲ್ಲು ಕಚ್ಚಿದ್ದರಿಂದ ಬಾಯಿಂದ ಮಾತೇ ಹೊರಡಲಿಲ್ಲ. ಫೋನ್ ಕಟ್ ಮಾಡಿದೆ.

✵